ಬೆಳಗಾವಿಯಲ್ಲಿ ಕರ್ನಾಟಕದವರು ಕಾಂಗ್ರೆಸ ಸಭೆಗೆ ಕೊಟ್ಟ ಆಮಂತ್ರಣವನ್ನು ಸ್ವೀಕರಿಸಿ ಕಾಂಗ್ರೆಸ ಸಭೆಯು ಹಿಂದುಸ್ಥಾನದ ರಾಷ್ಟ್ರೀಯ ಸಭೆಯಾಗಿ ಬಂದು ಬಾಗ್ಯವಿತ್ತರು. ಒಂದು ವರ್ಷದಲ್ಲಿ ಸ್ವರಾಜ್ಯ ಸಿಕ್ಕುವಂತೆ ಕಾಂಗ್ರೆಸವು ಮಾಡಬೇಕೆಂಬ ಸಭೆಯು ಸ್ವರಾಜದಲ್ಲಿ ಭೂಪಾಲಕರ ಹೋರಾಟವೆಂಬುದು ಅವಶ್ಯವಿದೆಯೆಂದೆನಿಸಿದವರು, ಅದು ಬೇರೆ [illegible] ದೇಶದ ಕಾರ್ಯವೆಂದೂ ಇದೇ ಆಗುವದೆಂಬುದು ಸಂದೇಹವಿಲ್ಲ. ಬೆಳಗಾವಿಯ ಕಾಂಗ್ರೆಸ ಸಭೆಯಲ್ಲಿ ಗಾಂಧಿ ಬಣದ ಮತ್ತು ದಾಸರ ಪಕ್ಷದವರ ಘರ್ಷಣೆಯಾಗಿ, ಸಂಪೂರ್ಣ ಬಿಕ್ಕಟ್ಟು ಉಂಟಾಗುವದೆಂದು ಅನೇಕರು ಭವಿಷ್ಯ ಮಾಡಿದ್ದರು. ಈ ಭವಿಷ್ಯವು ಪೂರಾ ಸುಳ್ಳಾಯಿತು. ಕಾಂಗ್ರೆಸದ ಎರಡು ಬಣಗಳಲ್ಲಿ ಮಾತ್ರ ಪಕ್ಷವಾಗದೆ, ಹಿಂದುಸ್ಥಾನದ ಸಮಸ್ತ ರಾಜಕೀಯ ಸಂಘಗಳ ಐಕ್ಯವಾಗುವದೆಂಬುದು ಅಭೂತಪೂರ್ವ ಘಟನೆಯಾಗಿರುವದು. ಸುರತ ಕೋಲಾಹಲದ ನಂತರ ಅಗಲಿದ್ದ ಕಾಂಗ್ರೆಸದ ಮವಾಳರು ಕಾಂಗ್ರೆಸದ ಬಾಹಿರರಾಗಿದ್ದರು. ಅನಂತರ ಅಸಹಕಾರದ ದೆಸೆಯಿಂದ ರಾಷ್ಟ್ರೀಯರು ಕಾಂಗ್ರೆಸದ ಬಾಹಿರ ಮತ್ತು ಪ್ರವರ್ತಕರಾಗಿದ್ದರು. ಬೆಳಗಾವಿಯ ಕಾಂಗ್ರೆಸದ ಎಲ್ಲ ವ್ಯವಸ್ಥೆಯು ರಾಷ್ಟ್ರೀಯರ ಕಲ್ಪಿತವಿದ್ದರೂ, ಸಭೆಯ ಮುಂದೆ ಬರುವ ಠರಾವುಗಳು ಮವಾಳ, ಸೆಂಟರ ಲಿಬರಲ, ನೇಷನ ಲೀಗ ಮತ್ತು ಜಸ್ಟಿಸ ಮುಂತಾದ ಪ್ರಾಂತಿಕೋದ್ದೇಶಿಯ ಮುಖಂಡರು, ಕಾಂಗ್ರೆಸಕ್ಕೆ ವಕ್ತವ್ಯವನ್ನು ಹುಟ್ಟಿಸುವ ಕಮೀಟಿಗೆ ಬೇರೆಯಿಂದ [illegible] ಅವರ ಮನಸ್ಸನ್ನು ಗೆಲ್ಲುವ ಯುಕ್ತಿಯಾದದ್ದು ಒಂದು ವಿಶೇಷವು.

ರಾಷ್ಟ್ರೀಯರ ವಾರ್ಷಿಕದಂತೆ ಸಭೆಯಲ್ಲಿ ಅಧ್ಯಕ್ಷರುಗಳು, ಲಿಬರಲ, ಸೇವಾ ಮತ್ತು ಸ್ವರಾಜ್ಯದ ತತ್ವ ಪ್ರಸಂಗ ಗಳಂಥ ಸ್ಪರ್ಶದಿಂದ ವರು ಪಡೆಯಲಿವೆ. ಇದು ಸರ್ವರ ಒಂದಕ್ಕೆ ಬರುವ ಮಾತನ್ನು ಯಾರು ಕೇಳರಿಯದ ಪ್ರತ್ಯಕ್ಷ ಸಾಧನವಾಗಿ ತೋರಿಬರುತ್ತದೆ. ಆದರೂ [illegible] ಸಮಿತಿಯ ಸ್ವಾತಂತ್ರ್ಯ, ಕಾರ್ಯ ಕ್ರಮ [illegible]. ಇಂಥ ಮುಖ್ಯ ಮುಂದಾಳು ಮಾತ ಕೊಂಡು, ವಿಚಾರಗಳನ್ನು ಪೂರ್ಣಗೊಳಿಸಬೇಕು. ಕೆಲವು ವಿಚಾರಗಳಲ್ಲಿ ತಪ್ಪಿದರು. ಪಾರ್ಲಿಮೆಂಟ ಸಭೆಯು ಮೇಲೆ ನಿಟಿನ ಆದರಿಂದ ದೂರವಾಗುವದಿಲ್ಲ. ಈ ರೀತಿಯನ್ನು ಹಿಂದುಸ್ಥಾನದ ವಿವಿಧ ಪಂಗಡಗಳು ಅಂಗೀಕರಿಸಿದರೆ ಕಾಂಗ್ರೆಸವು ರಾಷ್ಟ್ರೀಯ ಸಭೆಯಾಗುವದು. ಮತ್ತು ದೇಶದಲ್ಲಿ ಐಕ್ಯತೆಯುಂಟಾಗುವದು.

ಕಾಂಗ್ರೆಸ್ಸಿನ ಲಿಬರಲ ಮೊದಲಾದವರ, ಪಾರ್ಲಿಮೆಂಟ ಸಭೆಯ ಜೊತೆಗೆ ಜೋಡಿಸಿಕೊಂಡು ತಮ್ಮ ಕಡೆಗೆ ಎಳೆದುಕೊಳ್ಳಬೇಕೆಂದು ಸಹಕಾರದ ಪ್ರಯತ್ನ ಮಾಡಿದರು. ದಾಸರ ಪಕ್ಷದವರ ಗಣ್ಯ ಶಾಸ್ತ್ರಿಗಳು. ಅವರ ಪಕ್ಷದ ರಾಜಕೀಯ ಸ್ಥಿತಿ ಸ್ವಲ್ಪ ಬದಲಾಯಿಸಿದಲ್ಲದೆ ತಮ್ಮ ಪಕ್ಷವನ್ನು ಪ್ರಿಯ ಪಡಿಸಿದ ಮುಂದಿಟ್ಟು ಅವರ ಸ್ವತಂತ್ರವನ್ನು ಪಾರ್ಲಿಮೆಂಟ ಸಭೆಯಲ್ಲಿ ಮಾಡಿ ತೋರುವರು. ಹಿಂದುಸ್ಥಾನದಲ್ಲಿಯೂ ಮವಾಳರು, ಜಸ್ಟಿಸ್‍ಪಂಥ ಪಕ್ಷದವರು, ಬ್ರಾಹ್ಮಣೇತರರು ಈ ಬಗೆಯಾಗಿ ವರ್ತಿಸಿದರೆ- ಬಹುಮುಖ್ಯವಾದವರ ಕಡೆಗೆ ಕಾಂಗ್ರೆಸ ಸಭೆಯು ಒಲಿಯುವದು. ಅದರ ಕಾರಣ ರಾಷ್ಟ್ರೀಯರು ಬೇರೆ, ರಾಷ್ಟ್ರ ಧ್ಯೇಯ ಬೇರೆ ಎಂ-

-ದು ಹೇಳುವವರಿಗೆ, ನಮ್ಮ ಪಕ್ಷದವರು ನಂ ಬಿಕೆಯ ದೃಷ್ಟಿಯಾಗುತ್ತದೆ. ಬೇರೆಯವರು ಅಲ್ಪ ದೃಷ್ಟಿಯುಳ್ಳವರಾಗಿ ವರ್ತಿಸಿದರೆ- ದೇಶದ ಹಿತವನ್ನು ಸ್ವರಾಜ್ಯದ ಸಂಪಾದನೆಯ [illegible], ಬೇರೆ ಪಕ್ಷದ ಮನುಷ್ಯರ ಪ್ರಶ್ನೆ, ಪಕ್ಷಪಾತವು ಮಾತ್ರ ಇರುವದಿಲ್ಲ. ಪ್ರತಿಯೊಂದು ರಾಜಕೀಯ ಮತದವರು ಅಷ್ಟು ಪ್ರಾಮಾಣಿಕ ಮತ್ತು ವಿಚಾರಶೀಲರು ಜನರ ವೃತ್ತಿಯ ಪ್ರಕಾರ ಕಾಂಗ್ರೆಸದಲ್ಲಿ ಸೇರುವದೇ ಐಕ್ಯದ ಉತ್ತಮ ಮಾರ್ಗವು.

—

ಬೆಳಗಾವಿಯ ಕಾಂಗ್ರೆಸ.

(ವಿಜಯಕ್ಕಾಗಿ ಬಂದ ಸ್ವಂತದ ಪತ್ರ)

—೦—

ಬೆಳಗಾವಿ ತಾ|| ೨೮-೧೨-೨೪

ರಾಷ್ಟ್ರೀಯ ಸಭೆಯ ಸಿದ್ಧತೆಯು ವಿಶೇಷವಾದ ಉತ್ಸಾಹದಿಂದ ನಡೆದಿದೆ. ಬೇರೆ ಬೇರೆ ಊರುಗಳ ಜನರು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ. ಸಭೆಯು ಕೇವಲ ಕರ್ನಾಟಕದ ಮರ್ಯಾದೆಗೆ ಅನುಸರಿಸಿ ನಡೆಯುವಂತೆ ಸಂಘಟನೆಗಳು- ಪ್ರತಿಯೊಬ್ಬರು ಪ್ರಯತ್ನಿಸುವರು. ಕಾಂಗ್ರೆಸದ ಮಂಟಪದಲ್ಲಿಯೇ ವಿದ್ಯಾರ್ಥಿ, ಗೋರಕ್ಷಣ, ಅಸ್ಪೃಶ್ಯತೆ, ಮಹಿಳಾ ಮೊದಲಾದ ಸಭೆಗಳು ಕೂಡುವವೆಂದು ಪತ್ರಿಕೆ ತಿಳಿದಿದೆ.

ಸಭೆಯ ಪ್ರಾರಂಭವು ೨೬-೧೨-೨೪ರಿಂದ ಪ್ರಾರಂಭವಾಗುವದು. ವಿಷಯ ನಿಯಾಮಕ ಕಮೀಟಿಗಳು ೨೪-೨೫ ತಾರೀಖುಗಳಲ್ಲಿ ಕೂಡುವವು. ಮತ್ತು ಮುಖ್ಯ ಸಭೆಯು ೨೬-೨೭-೨೮ ದಿವಸಗಳಲ್ಲಿ ಸೇರುವದು. ಮಹಾತ್ಮರು ಬರುವದು ತಾರೀಖಿನ ದಿವಸ ಆಗಬಹುದು.

ಪ್ರೇಕ್ಷಕ ಪ್ರತಿನಿಧಿಗಳ ವಾಸಸ್ಥಾನಗಳ ವ್ಯವಸ್ಥೆಯು ೧೦೫ ನೇ ಕ್ಯಾಂಪಿನವರಿಗಾಗಿ ಮುಗಿದಿರುವದು. ಸ್ವಯಂಸೇವಕರು ಬೇರೆ ಬೇರೆ ಸಾಧನಗಳನ್ನು ನಡೆಸುವಂತೆ ಎಲ್ಲರಿಗೆ ಪ್ರೋತ್ಸಾಹಿಸುತ್ತಿದ್ದಾರೆ.

ಮಿಲಿಟರಿ ಪ್ರತಿನಿಧಿಗಳು ಇಳಿದುಕೊಳ್ಳುವ ಸ್ಥಳಗಳು ನಗರದ ಸಮೀಪದಲ್ಲಿ ಮಾಡಲ್ಪಟ್ಟಿವೆ. ಸ್ಥಳಗಳ ನಡೆಯುವ ಸ್ವಚ್ಛತೆಯ ಕಡೆ ಲಕ್ಷ್ಯವಿದೆ. ಪ್ರದರ್ಶನದ ಮಂಟಪದ ವ್ಯವಸ್ಥೆಗೆ ವ್ಯವಸ್ಥೆಯಾಗಿದೆ.

ಪ್ರಾಸ್ಥಾನ ಮಂಡಳಿಯವರು ಪ್ರಾತಃಕಾಲದಿಂದ ಸಭೆಯ ಒಳಗಿನವನ್ನು ಕುರಿತು ೧೨ ನೇ ತಾರೀಖಿನಿಂದ ಪ್ರಾರಂಭಿಸುವರು. ಸ್ವಯಂಸೇವಕರ ದಕ್ಷತೆಯು ಕೆಲಸವನ್ನು ಪ್ರತ್ಯಕ್ಷ, ಸಭೆಗಳು ಮಾಡುವರು. ಅವರ ಬರವು ಕಾರ್ಯಕಾರಿ ಮಂಡಳಿಯ ಕಡೆ ಬೆಳಕು ಕಾಣಬೇಕಾಗಿದೆ.

ವಿಜಯನಗರ ಸ್ಟೇಷನ ಸಮೀಪದ ಕೆಲಸ ನಡೆದಿದೆ. ಪತ್ರಿಕಾ ಕಾರ್ಯಾಲಯಗಳಿಗಾಗಿ ಮುಗಿಯುವದು.

ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದ ಬರತಕ್ಕ ಪ್ರತಿನಿಧಿಗಳ ಸಂಖ್ಯೆ ಬಂದಿಲ್ಲ. ಅವು ಬೇಗನೆ ಬಂದು ಮಾಡಿ ಬಳಸುವದೆಂದು ಕಾರ್ಯವು ಸುಲಭವಾಗಿ ಜರಗುವದು.

ಕನ್ನಡ ಮಾತಾಡುವ ಎಂಬ ಹಾಡವನ್ನು ಪರ್ಯಾಯದ ಪತ್ರಗಳಲ್ಲಿ ಬರೆಸಿ, ವ್ಯಕ್ತಿಗಳ ಟೀಕೆಯನ್ನು ಮಾಡುತ್ತಾ ಕೂಡ್ರದೆ, ಕರ್ನಾಟಕಕ್ಕೆ ಗೌರವ ತರುವಂತೆ ದಕ್ಷತೆ ವರ್ತನೆಯಿಟ್ಟು, ಮತ್ತು ಕೆಲಸದಲ್ಲಿ ಕರ್ತವ್ಯಪ್ರಜ್ಞೆಯಿಂದ ವರ್ತಿಸಬೇಕೆಂಬ ಈ ಸುದ್ದಿಗಾರನ ವಿನಂತಿಯಾಗಿದೆ. ಕಾಂಗ್ರೆಸದ ಕೆಲಸ ತೀವ್ರದ ನಂತರ ದೋಷಗಳನ್ನು ಎತ್ತಿ ಬರಿಯಬಹುದು. ಈ ದಿವಸದ ಕಾರ್ಯಕ್ಕೆ ವಿಘ್ನವಾಗಬಾರದು. ಮತ್ತು ಕಾರ್ಯ ಭ್ರಾಂತವಾಗಬಾರದು.

ಕರ್ನಾಟಕದ ನಕಾಶೆಯ ಸ್ವರೂಪದ್ದಿರಿಸಿ. ಕಾಂಗ್ರೆಸದ ಪಾಲಿಯಲ್ಲಿ ಅದನ್ನು ಪ್ರತಿಷ್ಠೆ ಮಾಡುವ ವಿಚಾರವನ್ನು ಪಾತ್ರದ ಕರಡಿಗೆಂದರ ನಡೆಸಿದ್ದಾರೆ.

ಪರಿಷತ್ತು —

ಬೆಳಗಾವಿಯಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಕಮೀಟಿ ಸೇರಿ, ಕೆಳಗಿನ ಗೃಹಸ್ಥರನ್ನು ಬೆಳಗಾವಿ ಪರಿಷತ್ತ ಕಮಿಟಿಯು ಚುನಾಯಿತರಾಗಿ ಆರಿಸಿದ್ದಾರೆ.

೧ ದಿವಾನ್ ಬಹಾದ್ದೂರ ಸಾಹೇಬ
೨ ಮಿ ಮಹಮದ [illegible]
೩ ಮಿ. ಅಬ್ದುಲ್ ಖಾದರ [illegible]
೪ ಮಿ. [illegible]
೫ ಮಿ. ಮಹಮದ [illegible], ಮಂಗಳೂರ
೬ ಮಿ. [illegible]
೭ ಮಿ [illegible]

ಸಾಮಾಜಿಕ ಪರಿಷತ್ತು—

ಕಾಂಗ್ರೆಸದ ವೇಳೆಯಲ್ಲಿ ಸಾಮಾಜಿಕ ಪರಿಷತ್ತು ನೆರೆಯುವದು, ಡಾ. ಬಿ ಅಧ್ಯಕ್ಷರು ಸ್ವಾಗತ ಕಮೀಟಿಯು ಚೇರಮನ್ನರಾಗಿದ್ದಾರೆ. ಮಿ ನಟ್ಟಿಯಂಕ್ಲಾಪುರ, ದಳವಿ ಶ್ರೀಮತಿ ಹಸಬಾರಿ ಮೊದಲಾದವರು ಕಾರ್ಯದರ್ಶಿಗಳಾಗಿದ್ದಾರೆ.

ಆಧ್ಯಾತ್ಮಿಕ ಪರಿಷತ್ತು

ಈ ಪರಿಷತ್ತು ಕೂಡುವದು. ಪತ್ರಿಕೆಯ ಕಾರ್ಯವನ್ನು ನಿರೀಕ್ಷಿಸಿದ ಸಂಪಾದಕರಾದ ಮಿ. ಕಾ ಸವಿಂದೆ ಇವರ ಕೂಡ ಮಾತನಾಡಿದ್ದು.

—

ಅರಾಜಕರಿಂದ ಬಿಡುಗಡೆ

ಅರ್ಧ ನೋಟ್ಸ !!

ಬಂಗಾಲ ಸರಕಾರದವರು ವಟಹುಕುಮಿನ ಮೇರೆಗೆ ಹಿಡಿದು, ತುರಂಗದಲ್ಲಿ ಹಾಕಿದವರಲ್ಲಿ ಇಬ್ಬ ಜನರನ್ನು ತುರಂಗದಿಂದ ಹೊರಗೆ ತಂದು, ಅವರಿಗೆ ಬೇರೆ ಬೇರೆ ಸ್ಥಳಗಳ ಪೋಲಿಸ ಅಮಲದಾರರ ಬಳಿ ಭೆಟ್ಟಿಯಾಗಲು ಹುಕುಮು ಮಾಡಿದ್ದಾರೆ. ಈ ಜನರು ಪೋಲಿಸ ಅಮಲದಾರರು ಹೇಳಿದಂಥ ಗ್ರಾಮಗಳಲ್ಲಿ ಕಾಲಕ್ಷೇಪ ಮಾಡಿಕೊಂಡಿರತಕ್ಕದ್ದು ಮತ್ತು ಪೋಲೀಸರ ಅಪ್ಪಣೆಯ ಹೊರತು ಬಿಟ್ಟು ಬೇರೆ ಭೆಟ್ಟಿಯಾಗತಕ್ಕದ್ದಲ್ಲ. ಈ ಹುಕುಮು ತುರಂಗದ ಹುಕುಮಿನಂತೆ ಎನ್ನಬೇಕು. ಇಷ್ಟು ಜನರಿಗಾದರೂ ಅರಾಜಕರೆಂದು ನಿಶ್ಚಯಿಸಿ, ಅವರನ್ನು ದಸ್ತಗೀರ ಮಾಡಿದ್ದು ಸಂಪೂರ್ಣ ತಪ್ಪೆಂದೂ ಹೇಳುವಂತಾಯಿತು. ಇದರಂತೆ ಇನ್ನೂ ಅನೇಕರ ಅರ್ಧ ಮತ್ತು ಪೂರಾ ಬಿಡುಗಡೆಯಾಗುವದೆಂದು ಭಾವಿಸುತ್ತೇವೆ.

—

ಒಂದು ಲಕ್ಷದ ದಾವೆ

ಕಲಕತ್ತೆಯ ಮ್ಯುನಿಸಿಪಾಲಿಟಿಯ ಚೀಫ ಎಕ್ಸಿಕ್ಯೂಟಿವ ಆಫೀಸರರನ್ನು ಸರಕಾರದವರು ಬಂಧಿಸಿಟ್ಟಿದ್ದಾರಷ್ಟೇ. ಇವರು ರಾಜಕ್ರಾಂತಿ ಪ್ರವರ್ತಕರ ಬಳಗದವರೆಂದು, ಭಯಂಕರ ಜನರ ಸಂಬಂಧವುಳ್ಳವರೆಂದೂ ಕಲಕತ್ತೆಯ ಇಂಗ್ಲಿಷಮನ ಮತ್ತು ಸ್ಟೇಟ್ಸಮನ ಮೊದಲಾದ ಆಂಗ್ಲೋ ಇಂಡಿಯನ ಪತ್ರಗಳು ಬರೆದಿರುತ್ತವೆ. ಈ ಪತ್ರಗಳ ಲೇಖದಿಂದ ಸರಕಾರವು ತಮ್ಮನ್ನು ಬಹುಕಾಲ ಬಂಧನದಲ್ಲಿಡಬೇಕಾಗಿರುವದರಿಂದ ಮತ್ತು ತಮ್ಮ ಮಾನಕ್ಕೆ ಕುಂದು ಬರುವದರಿಂದ, ತಮಗೆ ಒಂದು ಲಕ್ಷರೂಪಾಯಿ ನಷ್ಟ ತುಂಬಿಸಿಕೊಡಬೇಕೆಂದು ಚೀಫ ಆಫೀಸರರು ಕಲಕತ್ತೆಯ ಹಾಯಕೋರ್ಟಿನಲ್ಲಿ ದಾವೆ ಮಾಡಿದ್ದಾರೆ.

—

ಸಿಂಧಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಮುಂದಿನ ವರ್ಷದ ಕಾಂಗ್ರೆಸವನ್ನು ಕರಾಚಿಯಲ್ಲಿ ಕೂಡಿಸಬೇಕೆಂದೂ ಆ ಪ್ರಕಾರ ಆಮಂತ್ರಣ ಕೊಡಬೇಕೆಂದೂ ಠರಾವು ಮಾಡಿದ್ದಾರೆ.

ಆಂಧ್ರದೇಶದವರು ತ್ರಿಚಿನಾಪಳ್ಳಿಯಲ್ಲಿ ಯುನಿವ್ಹರ್ಸಿಟಿ ಸ್ಥಾಪಿಸಬೇಕೆಂಬ ಚಳವಳಿ ನಡೆಸಿದ್ದಾರೆ.

ಮುಂಬಯಿಯಲ್ಲಿ ಪಾಸಾದ ಎರಡು ಮಹತ್ವದ ನಿರ್ಣಯಗಳು.

—೦—

ಮೌಲಾನಾ ಮಹಮದಲ್ಲಿಯವರು ಎಲ್ಲ ಪಕ್ಷಗಳ ಪ್ರತಿನಿಧಿಗಳ ಸಭೆಯನ್ನು ಸೇರಬೇಕೆಂದು ಆಮಂತ್ರಣ ಪತ್ರಿಕೆಯನ್ನು ತೆಗೆದಾಗ, ಇವರು ಬಹಳ ದೊಡ್ಡ ಜವಾಬದಾರಿಯನ್ನು ಹೊತ್ತರೆಂದೂ, ಅತ್ಯಂತ ರಾಜನಿಷ್ಠ ಬಂದ ಪ್ರಾರಂಭವಾಗಿ ಸ್ವಾತಂತ್ರ್ಯದ ವರೆಗಿನ ತರತರ ಭಿನ್ನ ಭಿನ್ನ ಅಭಿಪ್ರಾಯದ ಜನರನ್ನು ಒಂದುಗೂಡಿಸುವುದೆಂದರೆ- ಇಷ್ಟೇನು ಸುಲಭ ಮಾತು ಸವರಿನ್ನೆಂತರ ಕೆಲವರು ಸಂಶಯಗೊಂಡರು. ಮದ್ರಾಸದ ಬ್ರಾಹ್ಮಣೇತರರು ಇದೇ ವಿಷಯವಾಗಿ ಮುಂದಾಗಿ ಮಾಡಿದ ಠರಾವು ಮತ್ತು ಸರ ಶಿವಲ ಜಾಡರು ಮುಂತಾದವರು ಹಾಗು ಮೌಲಾನಾ ಅಲ್ಲೀ ಬಂಧುಗಳ ಮೇಲೆ ಮಾಡಿದ ಟೀಕೆ ಈ ಸಂಶಯಕ್ಕೆ ಬಲಕೊಟ್ಟವು. ಆದರೆ ದಿವಾನಬಹಾದ್ದೂರ ಚಿಂತಾಮಣಿ, ನಾಮದಾರ ಶ್ರೀನಿವಾಸ ಶಾಸ್ತ್ರಿ ಮೊದಲಾದವರು ತೋರಿಸಿದ ಮರುಸಿನಿಂದ ಸಭೆಯು ನಿಸಂಶಯವಾಗಿ ಯಶಸ್ವಿಕರವಾಗಿ ನಾಗುವದೆಂದು ಕಂಡು ಬಂತು.

ಸಭೆಯಲ್ಲಿ ಎರಡೇ ಠರಾವುಗಳು ಪಾಸಾದವು. ಮೊದಲನೆಯದು ಸರಕಾರದ ದಬ್ಬಾಳಿಕೆಯನ್ನು ನಿಷೇಧಿಸುವದಾಗಿತ್ತು. ಈ ಠರಾವನ್ನು ಮಹಾತ್ಮರಾದರೇ, ಇನ್ನಾರ ಪ್ರತಿಷ್ಠಿತ ಮುಖಂಡರಾಗಲಿ ಸಭೆಯ ಮುಂದೆ ತರದೆ, ಇದನ್ನು ಬರೆಯುವದಕ್ಕಾಗಿಯೇ ಪ್ರತಿಯೊಂದು ರಾಜಕೀಯ ಪಕ್ಷದ ಪ್ರಮುಖರ ಕಮಿಟಿ ನೇಮಿಸಿದರು. ಕಮೀಟಿಯಲ್ಲಿ ಕೆಳಗಿನ ಗೃಹಸ್ಥರಿದ್ದರು.

ಮಹಾತ್ಮರು ಜೀನಾಸಾ, ದೇಶಬಂಧು ದಾಸ, ಮಿ. ಶಾಸ್ತ್ರಿ, ದಿವಾನಬಹಾದ್ದೂರ ಚಿಂತಾಮಣಿ, ಮಿ. ಪೇಟಿಟ, ಡಾಕ್ಟರ ಅನಿಬೆಸೆಂಟ, ಶ್ರೀ. ಬಿಪಿನಚಂದ್ರಪಾಲ, ಪಂಡಿತ ನೆಹರು, ಮಿ ರಾಮಸ್ವಾಮಿ ಮೊದ್ಲಿಯಾರ, ಲಾಲಾ ಮಹಿಕಿಸನಲಾಲ, ಮಿ. ನರಸಿಂಹರಾಯ, ಮಿ. ಮುನಿಸ್ವಾಮಿ ನಾಯುಡು, ಡಾಕ್ಟರ ಅನಸಾರಿ ಮೌಲಾನಾ ಅಬ್ದುಲ್ ಕಲಮ ಆಜಾದ ಡಾಕ್ಟರ ಮುಂಜೆ ಸರ ಪುರುಷೋತ್ತಮದಾಸ ಠಾಕೂರದಾಸ, ಶ್ರೀ. ಪಟೇಲ ಮತ್ತು ಮಿ. ಸುರ್ವೆ.

ಕಮೀಟಿಯು ಬೇರೆಬೇರೆ ವಿಷಯದ ಸೂಕ್ಷ್ಮಗಳ ವಿಚಾರ ಚರ್ಚೆ ಮಾಡದೆ, ಮತ್ತೈಕ್ಯದಿಂದ ಸಂಧ ಠರಾವನ್ನು ಬರಿಯಬೇಕೆಂದು ಸೂಚಿಸಲ್ಪಟ್ಟಿತು. ಕಮೀಟಿಯಲ್ಲಿ ಬಹುಮತದಿಂದ ಕೂಡ ಒಪ್ಪಿಗೆ ಯುಳ್ಳ ಠರಾವು ಬ್ಯಾಕೆಂಬ ಭಾವನೆಯಿತ್ತು. ಮಹಾತ್ಮರು ಠರಾವನ್ನು ಸೂಚಿಸಿದರೂ, ಅದನ್ನು ಒಳಿಯುವ ಭಾರವು ನಾಮದಾರ ಶಾಸ್ತ್ರಿ ಮತ್ತು ದಿವಾನ ಬಹಾದ್ದೂರ ಚಿಂತಾಮಣಿಯವರ ಮೇಲಿದ್ದಿತು. ಮತ್ತು ಮುಂದಾಗಿ ಸೂಚಿಸಿದಂತೆ ಸರ್ವಾನುಮತದಿಂದ ಠರಾವು ಬರೆಯಲ್ಪಟ್ಟಿತು. ಮರುದಿವಸ ಕೂಡಿದ ಸಭೆಯಲ್ಲಿ ಒಬ್ಬಿಬ್ಬರು ಇದಕ್ಕೆ ಉಪಸೂಚನೆಗಳನ್ನು ತಂದರೂ, ಇವು ಅಷ್ಟಲ್ಲ ಮತಗಳಿಂದ ಸಾಮುದಾಯಿಕವಾಗಿ ಮೂಲ ಠರಾವು ಪಾಸಾಯಿತು. ಈ ಠರಾವಿನ ದಿಗ್ದರ್ಶನವನ್ನು ಹಿಂದಿನ ಸಂಚಿಕೆಯಲ್ಲಿ ಮಾಡಿದ್ದೇವೆ.

ಎರಡನೆಯ ಠರಾವು ರಾಜಕೀಯದಲ್ಲಿಯ ಎಲ್ಲ ಪಕ್ಷಗಳಲ್ಲಿ ಐಕ್ಯತೆಯನ್ನು ಹುಟ್ಟಿಸಿ, ಸ್ವರಾಜ್ಯವಿಷಯವಾಗಿ ಯೋಜನೆ ಬರೆಯುವದಾಗಿತ್ತು. ಇದರಲ್ಲಿ ಹಿಂದೂ ಮುಸಲಮಾನ ಐಕ್ಯ ಮತ್ತು ಬ್ರಾಹ್ಮಣ-ಬ್ರಾಹ್ಮಣೇತರ ಐಕ್ಯ ಮುಂತಾದ ವಿಷಯಗಳು ಬರುವವು. ಇದಕ್ಕಾಗಿ ಒಂದು ಕಮಿಟಿ ನೇಮಿಸಿದ್ದಾರೆ. ಕಮೀಟಿಯವರು ಬೆಳಗಾವಿಯಲ್ಲಿ ಕಾಂಗ್ರೆಸ ಸೇರುವ ಮುಂಚಿತವಾಗಿ ತಮ್ಮ ರಿಪೋರ್ಟ ಪ್ರಸಿದ್ಧ ಮಾಡಬೇಕೆಂದು ಕೆಲವರು ಸೂಚಿಸಿದರು. ಆದರೆ ಸಮಯವು ತೀರ ಕಡಿಮೆ ಇರುವದರಿಂದ, ನಾಲ್ಕು ತಿಂಗಳೆಂದರೆ ಮಾರ್ಚ ೧೫ ನೇ ತಾರೀಖಿನ ತನಕ ಅವಧಿ ಕೊಡಲ್ಪಟ್ಟಿತು. ಆಗ ಪುನ್ಹ ಮುಂಬಯಿಯಲ್ಲಿ ಸಭೆಯು ಕೂಡುವದು. ಈ ಸಭೆಯು ಕೂಡುವದಕ್ಕೆ ೧೫ ದಿವಸಗಳ ಅವಕಾಶವಿಟ್ಟು ಲೋಕ ಚರ್ಚೆಗಾಗಿ ಕಮಿಟಿಯು ರಿಪೋರ್ಟ ಪ್ರಸಿದ್ಧ ಮಾಡಬೇಕೆಂದು ಗೊತ್ತಾಗಿದೆ. ಕಮೀಟಿಯಲ್ಲಿ ಕೆಳಗಿನ ಗೃಹಸ್ಥರಿದ್ದಾರೆ.

೧ ದಿವಾನ ಬಹಾದ್ದೂರ ರಂಗಾಚಾರ್ಯರು ೨ ದಿವಾನ ಬಹಾದ್ದೂರ ರಾಮಚಂದ್ರರಾವ, ೩ ಸರ ಪುರುಷೋತ್ತಮದಾಸ, ೪ ನಾಮದಾರ ಶಾಸ್ತ್ರಿ, ೫ ಸರ ಸಪ್ರು ೬ ದಿ. ಬ. ಚಿಂತಾಮಣಿ ೭ ಡಾಕ್ಟರ ಅನಿಬೆಸೆಂಟ, ೮ ಪಂಡಿತ ಮಾಲವಿಯ ೯ ರ್ಯಾಂಗಲರ ಪರಾಂಜಪೆ ೧೦ ಸರ ಶಿವಸ್ವಾಮಿ ಅಯ್ಯರ, ೧೧ ದೇಶಬಂಧು ದಾಸ, ೧೨ ಮೌ. ಮಹಮದ ಯಾಕೂಬ ೧೩ ಮಿ. ಕಿದವಾಯಿ ೧೪ ಮಿ. ಜಿನ್ನಾ ೧೫ ಮೌಲಾನಾ ಮಹಮ್ಮದಲ್ಲಿ ೧೬ ಬ್ಯಾರಿಸ್ಟರ ಜೆನ್ನಾ ೧೭ ಮಿ. ಶಿಂದೆ ೧೮ ಶ್ರೀ. ಬಾಬುಭಾಯಿ ದೇಸಾಯಿ ೧೯ ಮಿ. ಪರಾಂಜಪೆ ೨೦ ದೇವಿ ಸರೋಜಿನಿ ನಾಯುಡು ೨೧ ಪಕೀರು ಅಜಮಲಖಾನ ೨೨ ಮೌ. ಅಬ್ದುಲ ಕಲಮ ಆಜಾದ ೨೩ ಮಿ. ಜೆ. ಬಿ. ಪಟೇಲ ೨೪ ಶ್ರೀ ಶ್ರೀನಿವಾಸ ಅಯ್ಯಂಗಾರ ೨೫ ಬಾಬು ಭಗವಾನದಾಸ ೨೬ ಶ್ರೀ ಕೇಳಕರ ೨೭ ಬ್ಯಾರಿಸ್ಟರ ಜಾಯ್ಕರ್ ೨೮ ಸರದಾರ ಮಂಗಲಸಿಂಗ ೨೯ ಅತಾ ಉಜನಕರರಾಯ ೩೦ ಶ್ರೀ. ರಾಜಗೋಪಾಲಚಾರ್ಯ ೩೧ ಶ್ರೀ. ಬಿಪಿನಚಂದ್ರಪಾಲ ೩೨ ಸರ ಮಹಿಕಿಸನಲಾಲ ೩೩ ಮುಸಲ್ಮಾನರ ಮತ್ತು ಬ್ರಾಹ್ಮಣೇತರ ಸಭೆಯ ಅಧ್ಯಕ್ಷರು ಇವರ ಪೂರ್ತಿ ಇನ್ನು ಕೆಲವರ ಹೆಸರನ್ನು ಸೇರಿಸಿ ಕೊಂಡಿದ್ದಾರೆ.

ಮುಂಬಯಿ ಸಭೆಯಲ್ಲಿಯೇ ಸರ್ವೈಕ್ಯವಾಗಿ ಬೆಳಗಾವಿಯ ಕಾಂಗ್ರೆಸ ಸಭೆಯು ಸಂಯುಕ್ತ ಸಭೆಯಾಗಬೇಕೆಂದು ಪ್ರತಿಯೊಬ್ಬರು ಹಾರೈಸಿದ್ದರು. ಆದರೆ ಅದು ಶಕ್ಯವಾಗದ್ದರಿಂದ ಪ್ರತಿಯೊಂದು ರಾಜಕೀಯ ಸಭೆಯವರು ತಂತಮ್ಮ ಪರಿಷತ್ತನ್ನು ಬೆಳಗಾವಿಯಲ್ಲಿ ಕೂಡಿಸಬೇಕೆಂದು ಗೊತ್ತಾಯಿತು. ಆ ನಿರ್ಧಾರವನ್ನು ಅವರು ತಮ್ಮ ರಾಷ್ಟ್ರೀಯ ಪರಿಷತ್ತಿನ ಸಭೆಯನ್ನು ಬೆಳಗಾವಿಗೆ ತರಬ ಒಪ್ಪಿದರು. ನಾಮದಾರ ಶ್ರೀನಿವಾಸ ಶಾಸ್ತ್ರಿ, ಚಿಂತಾಮಣಿಯವರು ಈ ತೆರದಾಗಿ ತಾವು ಪ್ರಯತ್ನ ಮಾಡುವಂತೆ ಆಶ್ವಾಸನ ಕೊಟ್ಟರು. ಬ್ರಾಹ್ಮಣೇತರರ ಪರವಿಂದ ಮಿ. ರಾಮಸ್ವಾಮಿ ಮೊದ್ಲಿಯಾರ ಹಾಗು ಸುರ್ವೆಯವರು ತಮ್ಮ ಪಕ್ಷದ ಜನರಲ್ಲಿ ಪ್ರೇರಣೆ ಮಾಡುವಂತೆ ಭಾಷೆ ಕೊಟ್ಟರು. ಈ ರೀತಿಯಾಗಿ ಪ್ರತಿಯೊಂದು ಪಕ್ಷದವರು ಉತ್ಸಾಹವನ್ನು ತೋರಿಸಿದ ನಂತರ, ಯಾವದಾದರೂ ಸಭೆಯವರು ಇದಕ್ಕೆ ಒಪ್ಪದಿದ್ದರೆ ಹಿಂದುಸ್ಥಾನ ಸರಕಾರದವರು ವಾರಂಟಿಲ್ಲದ ದಸ್ತಗೀರ ಮಾಡುವ ಕಾಯದೆ ಮಾಡಿದಂತೆ, ನಾವೂ ವಾರಂಟಿಲ್ಲದೆ ಅವರನ್ನು ಹಿಡಿದು, ಬೆಳಗಾವಿಗೆ ತರಬೇಕೆಂದು ಬ್ಯಾರಿಸ್ಟರ ಜಾಯ್ಕರ್ ಸಾಹೇಬರು ವಿನೋದದ ಭಾಷಣ ಮಾಡಿದರು. ತರುವಾಯ ಸಭೆಯನ್ನು ಕರೆದ ಮೌಲಾನಾ ಮಹಮ್ಮದಲ್ಲಿಯವರು ಪ್ರತಿನಿಧಿಗಳ ಆಭಾರ ಮನ್ನಿಸಿದ ನಂತರ ಸಭೆಯ ವಿಸರ್ಜನವಾಯಿತು.

ಸಭೆಯಲ್ಲಾದ ಮಹತ್ವದ ಭಾಷಣಗಳನ್ನು ನಾಳಿನ ಸಂಚಿಕೆಯಲ್ಲಿ ಬರೆಯುವೆವು. ಬೆಳಗಾವಿಯು ಕಾಂಗ್ರೆಸು ಅಸಹಕಾರ ಮತ್ತು ಸ್ವರಾಜ್ಯ ಪಕ್ಷದ ಸಂಯುಕ್ತ ಸಭೆಯಾಗದೆ ಅಪ್ರತ್ಯಕ್ಷವಾಗಿ ಹಿಂದುಸ್ಥಾನದಲ್ಲಿರುವ ಎಲ್ಲ ರಾಜಕೀಯ ಪಕ್ಷಗಳ ಸಂಯುಕ್ತ ಸಭೆಯಾಗುವದೆಂಬುದು ಸಂತೋಷದ ಸಂಗತಿಯಾಗಿರುತ್ತದೆ.

ಶ್ರೀ. ರಡ್ಡಿಯವರು ಕಾಂಗ್ರೆಸದ ದೀಕ್ಷೆ ತಕ್ಕೊಂಡರು

—೦—

ಮುಂಬಯಿ ಸಭೆಗೆ ಬಂದಿದ್ದ ಶ್ರೀ ಸಿ. ಆರ ರಡ್ಡಿ ಮತ್ತು ಶ್ರೀ. ನರಸಿಂಹರಾಜು ಈ ಇಬ್ಬರು ಪ್ರಮುಖ ಬ್ರಾಹ್ಮಣೇತರರು ಕಾಂಗ್ರೆಸದ ಸ್ವರಾಜ್ಯದ ಧ್ಯೇಯವನ್ನು ಒಪ್ಪಿ, ಕಾಂಗ್ರೆಸದ ಮೆಂಬರರಾದಂತೆ ಪ್ರತಿಜ್ಞಾ ಪತ್ರಿಕೆಯ ಮೇಲೆ ಸಹಿ ಮಾಡಿದರು. ಇವರು ಖರೇ ಮೆಂಬರರಾಗದೆ, ಕಾಂಗ್ರೆಸ ಕಾರ್ಯದಲ್ಲಿ ಸಂಪೂರ್ಣ ಉತ್ಸಾಹಾಸಕ್ತಿಯಿಂದ ಕೆಲಸ ಮಾಡುವರು. ಶ್ರೀ. ರಡ್ಡಿಯವರು ಮುಂಬಯಿ ಸಭೆಯನ್ನುದ್ದೇಶಿಸಿ ಕೆಳಗೆ ಕೊಟ್ಟಂತೆ ಅಭಿಪ್ರಾಯ ಪಟ್ಟಿರುತ್ತಾರೆ.

ಕೆಲವು ಜನಗಳ ಪ್ರತಿನಿಧಿಗಳು ಕಾಂಗ್ರೆಸದ ಕೂಡ ವ್ಯಾಪಾರ ವಿನಿಮಯ ಮಾಡಲಿಕ್ಕೂ, ಮುಂದಿನ ಚುನಾವಣೆಯಲ್ಲಿ ತಮಗೆ ದೊರೆಯಬೇಕೆಂದು ಕೇವಲ ರಾಷ್ಟ್ರೀಯರೆಂತ, ಇಂಥ ಬಡಿಯಲಿಕ್ಕೂ ಒಂದಿದ್ದರು. ಕಮ್ಮೆಯಾದ ಠರಾವಿನ ಪ್ರಕಾರ ಕೆಲಸ ಮಾಡುವದೇ ನಿಜವಾದ ಐಕ್ಯಟ್ಟಿನ ಪರೀಕ್ಷೆಯಾಗುತ್ತದೆ. ಎಲ್ಲರೂ ಮಾತಿನಿಂದಾದರೂ ಐಕ್ಯಟ್ಟನ್ನು ಹೇಳುವದು ಒಂದು ಲಾಭವೇ ಸೈ.

ಸರಕಾರದವರು ದಬ್ಬಾಳಿಕೆಯ ಕಾಯದೆಯನ್ನು ಹಿಂದಿರುಗಿ ತಕ್ಕೊಳ್ಳದಿದ್ದರೆ- ಐಕ್ಯಟ್ಟಿನ ಸಭೆಯವರು ಯಾವ ಉಪಾಯ ಕೈಕೊಳ್ಳುವರೆಂಬದನ್ನು ನೋಡಲು ಹಿಂದುಸ್ಥಾನವು ಕಾಯ್ದುಕೊಂಡಿರುವದು. ರಾಷ್ಟ್ರೀಯರೆಂಬುವರೆಲ್ಲರು ಒಂದಾಗಿ ಈ ಮುಂದೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಪಕ್ಷ ಮತ್ತು ಸರಕಾರ ಪಕ್ಷ ಎಂಬೆರಡೇ ಪಕ್ಷಗಳಾಗುವವು. ರಾಷ್ಟ್ರೀಯರು ಸ್ವರಾಜ್ಯ ಮತ್ತು ರಾಷ್ಟ್ರೀಯ ಹಕ್ಕುಗಳನ್ನು ಈ ಕ್ಷಣವೇ ದೊರಕಿಸುವಂತೆ ದೀಕ್ಷಾಬದ್ಧರಾಗುವರು.

ಬ್ರಾಹ್ಮಣೇತರರಲ್ಲಿ ಐಕ್ಯಟ್ಟು

—೦—

ಸರ ಕೆ. ವ್ಹಿ. ರಡ್ಡಿಯವರ ಮತವು.

—೦—

ಮುಂಬಯಿಯ ಐಕ್ಯಟ್ಟಿನ ಸಭೆಯನ್ನು ಕುರಿತ. ಮದ್ರಾಸದ ಮಂತ್ರಿಯಾಗಿದ್ದ ಸರ ಕೆ. ವ್ಹಿ. ರಡ್ಡಿಯವರು ಕೆಳಗೆ ಕೊಟ್ಟಂತೆ ಅಭಿಪ್ರಾಯಪಟ್ಟಿರುತ್ತಾರೆ.

"ಐಕ್ಯಟ್ಟಿನ ಪ್ರಕಾರವು ವಿಶೇಷವಾಗಿ ಆನಂದದ ಸಂಗತಿಯು. ಈ ದೊಡ್ಡ ದೇಶದಲ್ಲಿ ಎಲ್ಲ ಪಂಗಡಗಳು ಪುನಃ ಒಂದಾಗುವಂತೆ ಮಾಡಿದ ಯೋಜನೆಯು ನಿಜವಾಗಿ ಆನಂದದಾಯಕವಾಗಿರುತ್ತದೆ. ದಾರಿಯಲ್ಲಿ ವಿಘ್ನಗಳಿರುವದೆಂಬದನ್ನು ಬಲ್ಲೆನು. ಆದರೆ ನಾಯಕರ ಕೌಶಲ್ಯದಿಂದ ವಿಘ್ನಗಳು ದೂರವಾಗಿ ಹೋಗುವವು. ಮುಂಬಯಿಯಲ್ಲಿ ಪಾಸಾದ ಠರಾವು ಅರ್ಥ ಮೊದಲ ಸಾಧಿ ಬರಿ ಉತ್ತರವಾಗಿರುತ್ತದೆ. ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಮಹತ್ವಾಕಾಂಕ್ಷೆಯ ಬಗ್ಗೆ ಸಹಾನುಭೂತಿಯು ಕಂಡರೆ ಬರುತ್ತದೆ. ಇತಿಹಾಸದಲ್ಲಿ ಬರೆಯಲ್ಪಡುವಂಥ ಈ ಸಭೆಯ ಠರಾವು ಏನಿ ಸಾಧಿಸಲೇನನ್ನು ಪಡೆಯುವದು ಕೌತುಕದ ಪ್ರಶ್ನವಾಗಿರುತ್ತದೆ.

ಮುಂಬಯಿ ಮತ್ತು ಮದ್ರಾಸದ ಬ್ರಾಹ್ಮಣೇತರರು ಬೆಳಗಾವಿಯಲ್ಲಿ ಕೂಡುವದೇನು ಆನಂದದ ಸಂಗತಿಯು. ಮದ್ರಾಸಕ್ಕಿಂತ ಬೆಳಗಾವಿಯ ರಾಜಕೀಯ ವಾತಾವರಣವು ಶುದ್ಧವಾಗಿರುವದೆಂದು ನಾನು ಭಾವಿಸುತ್ತೇನೆ. ಮದ್ರಾಸದ ಬ್ರಾಹ್ಮಣೇತರರಲ್ಲಿಯ ಜಗಳ ನಿಂತಿದೆ, ಅವರು ಒಂದಾಗುವದಲ್ಲದೆ, ಮದ್ರಾಸ ಮತ್ತು ಮುಂಬಯಿ ಇಲಾಖೆಯ ಬ್ರಾಹ್ಮಣೇತರಲ್ಲಿಯೂ ಐಕ್ಯಮತ್ಯವಾಗುವದೆಂದು ನಂಬಿದ್ದೇನೆ. ಇವರು ತಾವು ಹೊರವು ಹಿಂದೂ ಜನರು, ಅನಂತರ ಬ್ರಾಹ್ಮಣೇತರರೆಂಬ ಕೃತಿಯಿಂದ ತೋರಿಸುವರೆಂದು ಆಶಿಸುತ್ತೇನೆ."

ಬೆಸೆಂಟರ ಅನುಯಾಯಿಗಳು ಸ್ವರಾಜ್ಯಪಕ್ಷ ಸೇರಿದರು.

ಮುಂಬಯಿ ಸಭೆಯು ಅಭೂತಪೂರ್ವ ಘಟನೆ ಮಾಡಿತು. ಎಲ್ಲ ಪಂಗಡಗಳು ಒಂದಾಗುವದು ಗೌರವಾಯಸ್ಪದವಾಗಿ ಆಶ್ಚರ್ಯಕಾರಕವೆನಿಸುವಂತೆ, ಅಸಹಕಾರದ ಟೀಕೆ ತಕ್ಕೊಂಡವರು ಸ್ವರಾಜ್ಯಪಕ್ಷ ಸೇರುವದು ಕೂಡ ಆಶ್ಚರ್ಯಕಾರಕವಾಗಿದೆ. ತೆಲಗು ಸ್ಥಾನದ ಸುಪ್ರಸಿದ್ಧ ಗೃಹಸ್ಥರಾದ ಶ್ರೀ. ಯಶಿ ಪ್ರಕಾಶ ಮುಂತಾದವರೂ ಅಂದ್ರದಲ್ಲಿ ಸಹಕಾರಿ ಕೃಷ್ಣಯ್ಯನವರು ಅಸಹಕಾರ ಪಕ್ಷದ ಮಹ್ರಿ ಚಿತ್ತದಾಸ ಏರಿ ಸರ್ವಸಮತದಿಂದ ಬೇಡವಾರ್ಯವಾಗಲೀ ಎಂದು ನಸ ನಮೆಗೆಯುಳ್ಳವರಾಗಿ, ಸ್ವರಾಜ್ಯಪಕ್ಷ ಸೇರಿದರು. ಇವರಂತೆ ಅಪ್ರಾಂತದ ಸುಪ್ರಸಿದ್ಧ ಬ್ರಾಹ್ಮಣೇತರರಾದ ಶ್ರೀ. ರಂಗನಾಥ ಮೊದ್ಲಿಯಾರರೂ ಸ್ವರಾಜ್ಯ ಪಕ್ಷ ಕೂಡಿಕೊಂಡರು. ತೆಲಗುನಾಡಿನ ಬ್ರಾಹ್ಮಣೇತರರು ಕಾಂಗ್ರೆಸದಲ್ಲಿ ಅಭಿಮಾನವುಳ್ಳವರಾಗಿ ಸ್ವರಾಜ್ಯ ಪಕ್ಷ ಸೇರುತ್ತಿರುವದು ನಿಜವಾಗಿ ಸಂತೋಷದ ಸಂಗತಿಯಾಗಿರುತ್ತದೆ.

ಸ್ವರ್ಗವಾಸಿ ಸರ ನಾರಾಯಣ ಗಣೇಶ ಚಂದಾವರಕರ ಸ್ಮಾರಕ ಫಂಡು ಹತ್ತು ಸಾವಿರ ರೂಪಾಯಿಯಾಗಿದೆ. ಇದರಿಂದ ಬರುವ ಬಡ್ಡಿಯನ್ನು ಎರಡನೇ ಎಲ್. ಎಲ್. ಬಿ. ಪರೀಕ್ಷೆಯಲ್ಲಿ "ಹಿಂದೂಲಾ" ದಲ್ಲಿ ೧ ನೇ ನಂಬರ ಪಾಸಾದ ವಿದ್ಯಾರ್ಥಿಗೆ ಪಾರಿತೋಷಕವಾಗಿ ಕೊಡುವರು.

ಐಕ್ಯಟ್ಟಿನ ಸಭೆಗೆ ದೃಷ್ಟಿಯು

ಐಕ್ಯಟ್ಟಿನ ಸಭೆಯಲ್ಲಿ ಪ್ರತಿಯೊಬ್ಬರು ದಬ್ಬಾಳಿಕೆಯನ್ನು ನಿಷೇಧಿಸಿ ಆರಂಭಕರ ವಿರುದ್ಧ ಭಾಷಣ ಮಾಡಿದರು. ಆದರೆ ಮದ್ರಾಸದ ಒಬ್ಬ ಅಸಹಕಾರಿ ಗೃಹಸ್ಥರು-

"ಸಭೆಯಲ್ಲಿ ರಾಜ್ಯಕ್ರಾಂತಿ ಪ್ರವರ್ತಕರನ್ನು ನಿಂದಿಸಿದರೂ ಅವರಿಗೆ ಗುಪ್ತವಾಗಿ ಸಹಾಯ ಮಾಡುತ್ತಿರುವರೆಂದು"

ಭಾಷಣ ಮಾಡಲು- ಅವರ ಹೆಸರು ಹೇಳಬೇಕೆಂದು ಸಭಾಸದರು ಕೂಗಿದರು. ಆಗ ಇವರು

"ಇಲ್ಲ, ನಾನು ಹೇಳುವದಿಲ್ಲ, ಮತ್ತು ಹೇಳಬಿಡಿಸುವದಿಲ್ಲ. ಏಕೆ ಹೆಸರು ಹೇಳಬೇಕು? . . ಎಂದು ಉತ್ತರ ಕೊಡಲು- ಸಭಿಕರು ಮತ್ತಷ್ಟು ಗಟ್ಟಿ ಧ್ವನಿಯಿಂದ ಹೆಸರು ಹೇಳರೆಂದು ಕೂಗಿದರು. ಮನಸಿಗೆ ಬಂದಂತೆ ಮಾತಾಡಕೊಡುವದೇ ಪಾಪ, ಎಂದು ಅಧ್ಯಕ್ಷರು ಸಭಿಕರನ್ನು ಸಮಾಧಾನಪಡಿಸಿದರು-

"ಹಾಗಾದರೆ ಈ ಮಾತಿನ ಮಲ್ಲರನ್ನು ನೋಡಿ" ಎಂದು ಕೂಗಿದರು. ಇದಕ್ಕೆ ಉತ್ತರವಾಗಿ ಈ ಗೃಹಸ್ಥನು ನಾನು ಹೇಡಿ, ಪುಕ್ಕನಾಗಬಹುದು. ಆದರೆ ಧೈರ್ಯಕ್ಕಿಂತ ವಿವೇಕವೇ ಶ್ರೇಯಸ್ಕರವೆಂದು ನುಡಿದು, ತಮ್ಮ ಪ್ರವಚನವನ್ನು ಮುಗಿಸಿದನು.

ಐಕ್ಯಟ್ಟಿನ ವಿಚಾರದ ಪೂರ್ವ ಸಿದ್ಧತೆ

ರಾಜಕೀಯದಲ್ಲಿಯ ಎಲ್ಲ ಪಂಗಡಗಳಲ್ಲಿ ಐಕ್ಯತೆಯನ್ನು ಹುಟ್ಟಿಸುವದಕ್ಕಾಗಿ ಒಂದು ಕಮೀಟಿಯನ್ನು ನೇಮಿಸಿದ ಸಂಗತಿಯನ್ನು ನಿನ್ನಿನ ಸಂಚಿಕೆಯಲ್ಲಿ ಬರೆದಿದ್ದೇವೆ. ಈಗ ಈ ಕಮೀಟಿಯು ನೆಂಬರರ ಸಂಖ್ಯೆಯು ೧೧೫ ರ ಮೇಲೆ ಹೋಗಿದೆ. ಕಮೀಟಿಯು ಸ್ಥಾಪನವಾದ ಕೂಡಲೆ, ಪ್ರಮುಖ ಮೆಂಬರರು ಸಣ್ಣ ಕಮೀಟಿ ಕೂಡಿಸಿ, ಐಕ್ಯಟ್ಟಿನ ಸಂಬಂಧದ ಮನಸ್ಸು ಕಾರ್ಯಕ್ರಮದ ಹೊರವು ಹಾಕಿದರು. ಪ್ರತಿಯೊಂದು ಪಂಗಡದವರು ಯಾವ ಶರ್ತುಗಳ ಪ್ರಕಾರ ತಾವು ಐಕ್ಯಟ್ಟಿನ ಸಭೆಯಲ್ಲಿ ಸೇರತಕ್ಕವರೆಂಬುದನ್ನು ದಿಸೆಂಬರ ತಿಂಗಳ ೨೦ ನೆಯ ತಾರೀಖಿನೊಳಗಾಗಿ ತಿಳಿಸಬೇಕೆಂದು ಇವರು ಗೊತ್ತು ಮಾಡಿದ್ದಾರೆ. ಇದಾದ ನಂತರ ಜನೆವರಿ ತಿಂಗಳ ಮಧ್ಯದಲ್ಲಿ ದಿಲ್ಲಿಯಲ್ಲಿ ಕಮೀಟಿ ಕೂಡಿ, ಬೇರೆ ಬೇರೆ ಜನಗಳಿಂದ ಬಂದ ಸೂಚನೆಗಳ ವಿಚಾರ ಮಾಡುವರು. ಅನಂತರ ಎಪ್ರಿಲ ತಿಂಗಳ ೩೦ ನೇ ತಾರೀಖಿನ ಸುಮಾರಕ್ಕೆ ಮುಂಬಯಿಯಲ್ಲಿ ಕೂಡಿದಂಥ ಸಭೆಯನ್ನು ಕೂಡಿಸಿ ಐಕ್ಯಟ್ಟಿನ ನಿಶ್ಚಯ ಮಾಡುವರು.

ಈ ಕಮೀಟಿಯ ವೆಚ್ಚಕ್ಕಾಗಿ ಲಾಲಾ ಹರಿಕಿಸನಲಾಲರು ೫೦೦೦, ಬ್ಯಾರಿಸ್ಟರ ಜಯಕರ ೧೦೦೦, ಶ್ರೀ ಶ್ರೀನಿವಾಸ ಅಯ್ಯಂಗಾರರು ೧೦೦೦, ಮತ್ತು ಬ್ರಾಹ್ಮಣೇತರರು ೫೦೦ ರೂಪಾಯಿ ಕೊಟ್ಟಿದ್ದಾರೆ.

ನಾಗರಹಾವಿಗೆ ಸಿಟ್ಟು ಬಹಳ

—೦—

ಮಂತ್ರದ ಸಾಮರ್ಥ್ಯದ ಸಾಕ್ಷಿಯು

ಶ್ರೀ. ಗೋಪಾಳರಾವ ನೆವಗಿ ಎಂಬ ಗೃಹಸ್ಥರು ನಾಯಿಕಲ ಮೇಲೆ ಕೂತು ಬೆಳಬ್ಬಗತ್ತಲೆಯಲ್ಲಿ ಬೆಳಗಾಂವಿಯಿಂದ ಶಹಾಪೂರಕ್ಕೆ ಹೋಗುತ್ತಿದ್ದಾಗ, ನಾಯಿಕಲ್ಲು ನಾಗರಹಾವಿನ ಬಾಲದ ಮೇಲೆ ಹಾಯಿತು. ಕೂಡಲೆ ಹಾವು ಇವರ ಕಾಲಿಗೆ ಕಚ್ಚಿತು. ಹಾವು ಕಚ್ಚಿತೆಂದು ಇವರು ತಿಳಕೊಂಡು, ಬೇಗನೆ ಮನೆಗೆ ಹೋದರು. ಡಾಕ್ಟರರ ಉಪಚಾರ ನಡೆಯಿತು. ಆದರೂ ಎಚ್ಚರದಪ್ಪಿದರು. ಸುದೈವದಿಂದ ಶಹಾಪೂರದ ಪ್ರಸಿದ್ಧ ಮಾಂತ್ರಿಕರಾದ ಶ್ರೀಯುತ ವಿಷ್ಣುಪಂತ ಬಾಯಡೆಯವರು ವ್ಯಾಪಾರಕ್ಕಾಗಿ ಆ ಊರಿಗೆ ಬಂದಿದ್ದರು. ಇವರು ಗೋಪಾಳರಾಯರನ್ನು ಮೊದಲು ಕಿತ್ತಲದಲ್ಲಿ ಒಂದು ಗಿಡಕ್ಕೆ ಬಿಗಿಸಿ, ಮಂತ್ರೋಚ್ಚಾರವನ್ನು ಪ್ರಾರಂಭಿಸಿದರು. ಕೆಲ ಹೊತ್ತಿನ ಮೇಲೆ ನಾಗಪ್ಪನಿಗೆ ಪ್ರಶ್ನೆಮಾಡಲು- ಕಾರಣವಿಲ್ಲದೆ ಗೋಪಾಳರಾಯರು ತನ್ನ ಮೇಲೆ ನಾಯಿಕಲ ಹಾಯಿಸಿದರೆಂದು ಉತ್ತರ ಬಂತು. ಇದಕ್ಕೆ ತಪ್ಪುಕಾಣಿಕೆಂದು ಪೂಜೆ ಕಡೆಗೆ ಹಾಲು ಇಟ್ಟರು. ಆ ಬಳಿಕ, ಗೋಪಾಳರಾಯರ ಮೇಲೆ ತಣ್ಣೀರು ಸುರಿವಲು, ಎಚ್ಚರಗೆದ್ದು ಮುಂದೆ ಪೂರಾ ಗುಣ ಹೊಂದಿದರು.

ಮೈಸೂರು ಪ್ರಾಂತ ದಕ್ಷಿಣ ಕನ್ನಡ ಜಿಲ್ಲೆಯ [illegible]

ಕೊಡಲಾಗಿ [illegible]

ಶ್ರೀ ದತ್ತಾತ್ರೇಯ ಕರ್ನಾಟಕ ನಾಟಕ [illegible]

[illegible]

ಸಂಗೀತ ನಾಟಕಗಳು

[illegible]	೧—೦—೦
[illegible]	೧—೦—೦
[illegible]	೧—೦—೦
[illegible]	೧—೦—೦

[illegible]

ದೊರೆಯುವ ಸ್ಥಳ— ಶ್ರೀ ದತ್ತಾತ್ರೇಯ ಕರ್ನಾಟಕ ನಾಟಕ ಮಂಡಳಿ.

ಗದಗ

ತ್ವರೆಮಾಡಿರಿ!

ಆಯುರ್ವೇದ ಔಷಧಾಲಯ, ಧಾರವಾಡ.

[illegible]

ಸುಪ್ರಸಿದ್ಧ [illegible]

[illegible]

[illegible] ಬೇಕು.

[illegible]

ಮನೆಯ [illegible]

[illegible]

ಸಂಪಾದಕರು,

ಸ್ವಯಂಸೇವಕರ ಮಧ್ಯವರ್ತಿ ಶಿಕ್ಷಣ [illegible]

“ಶ್ರೀ ಬಸವೇಶ್ವರ ಪತ್ರ[illegible]

(ಸತ್ಯಾಗ್ರಹಾಶ್ರಮ) [illegible]

[illegible]

ಪೂರಾ ೧೩ ಆಣೆ ಗುಣ ಯಾವಾಗ ಬರುತ್ತದೆ?

ಡಾಕ್ಟರರ ಪ್ರಿಸ್ಕ್ರಿಪ್ಶನದಂತೆ ತಕ್ಕಂತೆ ಅತ್ಯಂತ ಕಾಳಜಿ ಮತ್ತು ದಕ್ಷತೆಯಿಂದ ಔಷಧವನ್ನು ತಯಾ ರಾದಾಗಮಾತ್ರ! ಡಾಕ್ಟರರೂ ಒಪ್ಪುವ ಈ ಕೆಲಸದಲ್ಲಿ ಮೆಸರ್ಸ ಕನಕಾದಿಸ್ಕ ಮೆಡಿಕಲ ಸ್ಟೋರ ನ್ನು ಖಚಿತವಾಗಿ ಹೊಗಳುವ ಕಾರಣದ ಮುಖ್ಯ ಇಂಗಿತವೇ ಇದೇ ಇರುತ್ತದೆ.

ನೋವೊಂಟಿ ಕ್ಯಾಯೆರ ಅಂಜರಿ- ಒಂದೇ ಕ್ಷಣದಲ್ಲಿ ಗುಣ.

ಇಲಿಕಡಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಬೆಲೆ ಎರಡೇ ಆಣೆ

ವಿಳಾಸ— ದಿ ಕನಕಾದಿಸ್ಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನ ರೋಡ ಹುಬ್ಬಳ್ಳಿ.

ಲಿಂಗಾಯತ ಖಾನಾವಳಿ

ಮುಂಬಯಿ.

ಮುಂಬಯಿಯಲ್ಲಿ ವೀರಶೈವ (ಲಿಂಗಾಯತ) ಜನರ ಊಟದ ಅನಾನುಕೂಲತೆ ಬಹಳ ಇದ್ದ ಮೂಲಕ ಯಾವತ್ತು ಲಿಂಗಾಯತ ಅಭಿಮಾನಿಗಳ ಆಶ್ರಯದ ಮೂಲಕ ಈ ಸಂದಿ ಶಿಸ್ತನು ಆರಂಭಿಸಲಾಯಿತು. ಇಲ್ಲಿ ಲಿಂಗಾಯತ ಜನರಿಗೂ, ಬೇರೆ ಮತಸ್ಥರಿಗೂ, ಆದರದ ಪಕ್ವಾನ್ನ ಪ್ರಕಾರ ಊಟ, ಇದಕ್ಕೆ ಯೋಗ್ಯ ಸ್ಥಳ ಸಿಗುವದು ಅಸ್ಸರಿಂದ ಯಾವತ್ತು ಲಿಂಗಾಯತ ಅಭಿಮಾನಿಗಳು ಆಶ್ರಯ ಕೊಡಬೇಕೆಂದು ವಿನಂತಿಸುವ.

ಪತ್ತೆ:—	ಮಾಲಕ
ಕಾಳಬಾದೇವಿಪೊಲೀಸ	ಗುರುಪಾದಪ್ಪ ಬಿಜಾಪೂರ
ಫೋಪಲವಾಡಿ	ಮುಂಬಯಿ.
ಬರ್ಫವಾಲಾ ಬಿಲ್ಡಿಂಗ ೧ ಮಾಳಿ.	

ದಿ ವತನದಾರ ಬ್ಯಾಂಕ ಮತ್ತು ಕಮರ್ಶಿಯಲ್ ಏಜನ್ಸಿ

ಲಿಮಿಟೆಡ ಧಾರವಾಡ.

೧೯೧೩ ನೇ ಇಸ್ವಿಯ ಇಂಡಿಯನ್ ಕಂಪನಿ ಆ್ಯಕ್ಟ ಪ್ರಕಾರ ಈ ಕಂಪನಿಯು ರಜಿಸ್ಟರ ಮಾಡಲ್ಪಟ್ಟಿರುತ್ತದೆ

ಅಧಿಕೃತ ಭಾಂಡವಲ (Authorised Capital) ೩,೦೦,೦೦೦

ಒಂದು ಶೇರಿಗೆ ೧೫ ರೂಪಾಯಿಯಂತೆ ಒಟ್ಟು ಭಾಂಡವಲದಲ್ಲಿ ೨೦೦೦೦ ಶೇರು ಮಾಡಲ್ಪಟ್ಟಿವೆ.

ಸದ್ಯಕ್ಕೆ ೧೫ ರೂಪಾಯಿಯಕ್ಕೆ ಒಂದು ಶೇರಿನಂತೆ ೬೦,೦೦೦ ರೂಪಾಯಿಯ ಕಿಮ್ಮತ್ತಿನ ೪,೦೦೦ ಶೇರಗಳನ್ನು ಮಾರಲಿಕ್ಕೆ ತೆಗೆದಿರುತ್ತದೆ.

ಶೇರುಗಳ ಬಾಬತ ರೂಪಾಯಿಗಳನ್ನು ಕೊಡತಕ್ಕ ಪ್ರಕಾರ—

ಅರ್ಜಿಯ ಸಂಗಡ ರೂಪಾಯಿ ೫

ಮತ್ತು

ಅನಂತರದ್ದು ಉಳಿದ ೧೦ ರೂಪಾಯಿಗಳನ್ನು ಸಂಸ್ಥೆಯವರು ಕೇಳಿದರೆ ವರ್ಷಕ್ಕೆ ೫ ರೂಪಾಯಿ ಕಂತಿನಂತೆ ೨ ಹಪ್ತೆಯಿಂದ ಕೊಡತಕ್ಕದ್ದು.

ಡಾಯರೆಕ್ಟರರು

(೧) ಮಿ॥ ಹನುಮಂತರಾವ ರಾಮರಾವ ದೇಸಾಯಿ. ಬಿ. ಎ. ಎಲ್. ಎಲ್ ಬಿ. ವಕೀಲ ಧಾರವಾಡ

(೨) " ಶ್ರೀನಿವಾಸರಾವ ಮಾಳಾಪೂರ ಬಿ. ಎ ಎಲ್ ಎಲ್. ಬಿ. ಹಾಯಕೋರ್ಟ ವಕೀಲ, ಧಾರವಾಡ

(೩) " ಸುಬ್ರಾವ ನಾರಾಯಣ ಕುಲಕರ್ಣಿ ಬಿ. ಎ. ಎಲ್ ಎಲ್. ಬಿ. ವಕೀಲ, ಧಾರವಾಡ

(೪) " ಭಾಸ್ಕರ ಶಂಕರ ನಾಡಗೀರ ಬಿ ಎ ಧಾರವಾಡ

(೫) " ಸುರೇಂದ್ರ ಶಿವರಾವ ದೇಸಾಯಿ ಎಮ್. ಎ ಧಾರವಾಡ

(೬) " ಶ್ರೀನಿವಾಸರಾವ ರಾಘವೇಂದ್ರರಾವ ದೇಶಪಾಂಡೆ ವತನದಾರ ವ ಮರ್ಚಂಟ, ಧಾರವಾಡ

(೭) " ರಾಮರಾವ ಬಂಡಾರಾವ ದೇಶಪಾಂಡೆ ವಕೀಲ, ಹುಬ್ಬಳ್ಳಿ

(೮) " ಅನಂತರಾವ ನಾರಾಯಣ ಜಾಲಿಹಾಳ ವತನದಾರ ವ ವಕೀಲ, ಗದಗ

(೯) " ನಾರಾಯಣರಾವ ವಾಸುದೇವ ಹುಯಿಲಗೋಳ ಇನಾಮದಾರ ವ ಆನರರಿ ಮ್ಯಾಜಿಸ್ಟ್ರೇಟ ಗದಗ

(೧೦) ಡಾ. ವೆಂಕಟರಾವ ರಾಮರಾವ ಹುಯಿಲಗೋಳ ಇನಾಮದಾರ ವ ಎಮ್. ಬಿ. ಬಿ. ಎಸ್. ಗದಗ

(೧೧) ಮಿ. ಗೋಪಾಳ ಧೋಂಡರಾವ ದೇಶಪಾಂಡೆ, (ಎಕ್ಸ ಆಫೀಶಿಯೋ)

ಬ್ಯಾಂಕರರು—

(೧) ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ ವ ಹುಬ್ಬಳ್ಳಿ

(೨) ದಿ ಕರ್ನಾಟಕ ಇಂಡಸ್ಟ್ರಿಯಲ್ ಬ್ಯಾಂಕ ಲಿಮಿಟೆಡ್ ಧಾರವಾಡ

ಮ್ಯಾನೇಜಿಂಗ ಏಜಂಟ್ಸ.

ಮೆಸರ್ಸ ದೇಶಪಾಂಡೆ ಬ್ರದರ್ಸ, ಧಾರವಾಡ.

ಹಂಗಾಮೀ ರಜಿಸ್ಟರ್ಡ ಆಫೀಸ— ಧಾರವಾಡ ಮುನಸಿಪಲ್ ನಂ. ನೇ ಮನೆಯು.

ಈ ಕಂಪನಿಯ ಬಾಬತು ಶೇರಗಳನ್ನು ಖರೀದಿ ಮಾಡಲಿಕ್ಕೂ ಮತ್ತು ಕಂಪನಿಯು ತರ್ಫೆಯಿಂದ ಕೆಲಸ ಮಾಡಲಿಕ್ಕೂ ತರುಣ, ಉತ್ಸಾಹಿ ಮತ್ತು ಕಾರ್ಯಸಮರ್ಥರಾದಂಥ ಏಜಂಟರು ಪ್ರತಿಯೊಂದು ತಾಲೂಕಿನಲ್ಲಿ ಬೇಕಾಗಿರುತ್ತಾರೆ. ಇವರು ಆಯಾ ತಾಲೂಕಗಳಲ್ಲಿ ತಿರುಗಾಡಿ, ಶೇರುಗಳನ್ನು ಖಪಿಸತಕ್ಕದ್ದು. ಕಮಿಶನಗೆ ಸಹೀ ಮಾಡಿದ ಮ್ಯಾನೇಜಿಂಗ ಏಜಂಟರೊಡನೆ ಪತ್ರವ್ಯವಹಾರ ಮಾಡತಕ್ಕದ್ದು.

ಮೆಸರ್ಸ ದೇಶಪಾಂಡೆ ಬ್ರದರ್ಸ, ಧಾರವಾಡ

ಮ್ಯಾನೇಜಿಂಗ ಏಜಂಟ್ಸ

ಶಿವಂತಪೀರ

ಸುಪ್ರಸಿದ್ಧ | ಸುವಾಸಿಕ

ಹುರುಕಿನ ಔಷಧ ಚೀಟು ೧೦೦ಕ್ಕೆ		೪-೮-೦	೯ ಬಚ್ಚೆಯ ಮಾಲಿಶ ದಬ್ಬಿ ೧ಕ್ಕೆ		೦-೪-೬
ಕಂಠಮೋಚನ	೧೦೦	೪-೮-೦	೧೦ ಗಜಕರ್ಣ ಮಲಮು ,,	,,	೦-೪-೬
ಗರಿ ಆಮಸಂಹಾರಿ		೪-೮-೦	೧೧ ಇಸಬಿನ ಮಲಮು ,,	,,	೦-೪-೬
೨ ಜೇನೂ ಕೀರ ನಾಶಕ ,,	,,	೧-೧೨-೦	೧೨ ವ್ರಣನಾಶಕ ಮಲಮು ,,	,,	೦-೦-೬
೩ ಕಣ್ಣು ಬೇನೆಯ ಔಷಧ ,,	,,	೧-೦-೦	೧೩ ಮೂಳೆವಾತುಲವ್ಯಾಧಿಗೆ ಮಲಮು ,,		೧-೦-೬
೪ ಕ್ರಿಮಿನಾಶಕ (ಜಂತುನಾಶಕ) ,,	,,	೪-೦-೦	೧೪ ರಕ್ತಮೂಲವ್ಯಾಧಿನಾಶಕ ಚೂರ್ಣ ,,		೧-೦-೬
೫ ಜ್ವರಹರ ಚೂರ್ಣ ,,	,,	೧-೦-೦	೧೫ ಬಾಲಾಂತಿ ಗುಳಿಗೆಗಳು ,,	,,	೬-೦-೭
೬ ಪಿತ್ತಶಾಂತಿಯಾಗುವದಕ್ಕೆ ,,	,,	೪-೦-೦	ವಿಷಸಂಹಾರಿ (ದನದ ಔಷಧ) ,,		೧-೨-೦
೭ ಸೀಳೇಕಪ್ಪು ಮತಿಹತಿ ,,		೧-೦-೬			
ಶೀಗಸಂತಿಪಿಂಥಳ ಗುಳಿಗೆ	,,	-೦-೬			

ಸೂಚನೆ—ಪ್ರತಿಯೊಂದು ಸಾವಿರದ ಚೀಟುಗಳು ಖರ್ಚಾಗುವವು. ಎಲ್ಲ ಪ್ರಸಿದ್ಧ ವ್ಯಾಪಾರಸ್ಥರಲ್ಲಿ ಮಾರಲಿಕ್ಕೆ ಸಿಗುವವು ತೆಗೆದುಕೊಂಡರೆ ಭರಪೂರ ಕಮಿಶನ್. ೧ ರೂಪಾಯಿಗಿಂತ ಕಡಿಮೆ ಔಷಧ ನಮ್ಮಲ್ಲಿ ವ್ಹಿ.ಪಿ.ಯಿಂದ ಕಳುಹಿಸಲಿಕ್ಕಾಗುವದಿಲ್ಲ. ಔಷಧವನ್ನು ಬೇಡುವವರು ಒಂದು ನಾಲ್ಕನೇ ಅಂಕ ರಕಮು ಮುಂಗಡ ಕಳಿಸಬೇಕು. ಟಪಾಲ ಖರ್ಚು ಬೇರೆ. ಮಾಲ್ಕರು— ಶಿವಂತಪೀರ ಸ್ವಾಮಿ ಹಿರೇಮಠ (ಶಿಕ್ಕಾತ.)

ಬಾಂಚಿಯೀಸ	ಔಷಧಸಂಶೋಧಕ " ಶಿವಕೃಪ
ಶಿವಂತಪೀರ ಧಾರವಾಡ	ಮುಗದ ವ ಪೇಟ ಧಾರವಾಡ

ಆಯಿರ್ವೇದ ಔಷಧಿ ಕಾರಖಾನೆ ಚಿಕಿತ್ಸಾಲಯ

ಮನ್ಮಥವಿಲಾಸ ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಹೊಸ ಉತ್ಸಾಹವಾಗಿ ಶಕ್ತಿ ಬರುತ್ತದೆ. ೨೦ ಗುಳಿಗೆಗಳಿಗೆ ೧ ರೂ. ೧೦೦ಕ್ಕೆ ೪ ರೂ.

ಹುರುಕಿನ ಔಷಧ- ಚೀಟು ೧ಕ್ಕೆ ೧ ಆಣೆ ೧೦೦ಕ್ಕೆ ೩ ರೂ. ೮ ಆಣೆ.

ಕಣ್ಣಿನ ಔಷಧ- ಚೀಟು ೧ಕ್ಕೆ ಒಪೈ ೧೦೦ಕ್ಕೆ ೧ ರೂ.

ಹೇನಿನ ಔಷಧ- ಚೀಟು ೧ಕ್ಕೆ ೩ ಪೈ. ೧೦೦ಕ್ಕೆ ೨ ರೂ.

ಜ್ವರದ ಗುಳಿಗೆ- ಈ ಗುಳಿಗೆಗಳು ದೂಷಿತ ಜ್ವರ, ಮಲೇರಿಯಾ, ಇನ್‌ಫ್ಲ್ಯುಯೆಂಝಾ, ಸನ್ನಿಪಾತ, ಮೊದಲಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿವೆ ಮತ್ತು ಪ್ರವಾಸಿಕರಿಗೆ ಉಪಯುಕ್ತವಾದಂಥವುಗಳಿವೆ. ೪೦ಕ್ಕೆ ೧ ರೂ. ೧೦೦ಕ್ಕೆ ೨ ರೂ.

ಸೂಚನೆ— ಒಂದು ಆಣೆ ಟಿಕೇಟು ಕಳಿಸಿದಲ್ಲಿ ನಮ್ಮ ಸುಖಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯಿರ್ವೇದ ಕಾರಖಾನಾ ಪೋ. ಶಿಕ್ಕೂರ ಜಿಲ್ಲಾ ಬೆಳಗಾವ

ಇಂಪೀರಿಯಲ ಬ್ಯಾಂಕ ಆಫ ಇಂಡಿಯಾ ಶಾಖಾ— ಹುಬ್ಬಳ್ಳಿ

ವ್ಯವಹಾರದ ವೇಳೆ- ಮುಂಜಾನೆ ೧೧ ರಿಂದ ಮಧ್ಯಾಹ್ನದ ೩-೩೦ ರವರೆಗೆ ಶನಿವಾರ ೧೧ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲೂ ಖಾತೆಗಳು- ಪ್ರತ್ಯೇಕವಾಗಿ ತೆಗೆಯಲಾಗುವವು.

ಮುದ್ದತೀ ಠೇವುಗಳು- ಬಡ್ಡಿಯೊಡನೆ ತೆಗೆದುಕೊಳ್ಳಲ್ಪಡುವವು.

ಸೇವ್ಹಿಂಗ ಬ್ಯಾಂಕ- ಪ್ರತಿಸಾರೆ ತೆಗೆದುಕೊಳ್ಳಲ್ಪಡುವವು ಬಡ್ಡಿಯದರ ೪ ರೂ.

ಸರಕಾರೀ ಹಾಗೂ ಇತರ ಸಾಲಗಳು.

ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವದನ್ನು ಒದಗಿಸಿಕೊಡುವದರಲ್ಲಿ ಬರುವವು. ಬಡ್ಡಿ ಹಾಗೂ ನಫೆ ವಸೂಲುಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಅಲ್ಲದೆ ತಿಳಿಸಿದಲ್ಲಿ ಕಳಿಸಿಕೊಡುವದಕ್ಕೂ ಬರುವವು. ಸಾಲ ಹಾಗೂ ರೋಖಾ ಉದ್ರಿ ಕೊಡಲ್ಪಡುವವು. ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚೆಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಜನರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ, ಮೊಖತ್ಯಾರ ಪತ್ರಗಳೂ ಸಹ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ	ಜಿ. ಎ. ಬ್ರೌನ,
ತಾ, ೨೨-೮-೨೨	ಸ್ಥಾ. ಏಜಂಟ.

ಕುಲಕರ್ಣಿ ಸನ್ಸ ಕಂಪನಿ, ಧಾರವಾಡ. ಇವರ ವತನದಾರ ಕೆಂಟೆಗಳು



ಈ ರಂಟೆಯ ಶ್ರೇಷ್ಠ ಗುಣಗಳೆಂದರೆ—

೧ ಸಾಮಾನುಗಳು ಮಜಬೂತ ಇದ್ದು ಎತ್ತಿಗೆ ಅತಿ ಹಗುರಾದವು.

೨ ಕಾಲೊಳಗೆ ಕೊಂಪಿಗಳು ಬೀಳದೆ ಇರುವದರಿಂದ ಎತ್ತಿನಕಾಲಿಗೆ ಏನೊಂದು ಇಜಾ ಆಗುವದಿಲ್ಲ

೩ ರಂಟೆಯು ಏನೊಂದು ಕೊಂಕುವದಿಲ್ಲ. ಕಬ್ಬಿಣದ ಪಟ್ಟಿಗಳಿಂದ ಏನೂ ಕ್ಲಿಷ್ಟವಾಗುವದಿಲ್ಲ

೪ ಎತ್ತು ದೊಡ್ಡವಿದ್ದರೂ ಸಣ್ಣವಿದ್ದರೂ ಮತ್ತು ಸಾಲಕಡ್ಡಿ ನಡೆದ ಹೆಚ್ಚಿಗೆ ಅಂತರವಿದ್ದರೂ ಅಡಚಣೆ ಆಗುವದಿಲ್ಲ.

ಇದರೊಳಗೆ ಸಣ್ಣ ದೊಡ್ಡ ಆಕೃತಿಯ ೪ ಪ್ರಕಾರದ ರಂಟೆಗಳಿರುವವು. ವಿಶೇಷ ಸಂಗತಿ ಕೆಳಗಿನ ವಿಳಾಸಕ್ಕೆ

ಕೃತಿಸಿ ಬೇಕು ೧-೧-೨೨ ಕುಲಕರ್ಣಿ ಸನ್ಸ ಕಂಪನಿ ಹಿಲ್ಲೆ ಧಾರವಾಡ

ಸತ್ಯದೇವ ಜಯತೇ.

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋತ್ಸವ ಗುಳಿಗೆ.

ವಸ್ತು (ಗುಣವಾಗದಿದ್ದರೆ ಹಣ ಪರತ.) ಇಲ್ಲ

ಇಂದ್ರಿಯಸಂಬಂಧದ ಶಿಥಿಲತೆ, ನಿಬಲತೆ, ನಪುಂಸಕತ್ವ ಕ್ಷೀಣತೆ, ಸ್ವಪ್ನದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗುವವು. ಧಾತುಪೌಷ್ಟಿಕ, ವೀರ್ಯವರ್ಧಕ, ಬಲವರ್ಧಕ, ಕಾಮೋತ್ತೇಜಕ, ಮನೋತ್ಸಾಹವು ಇಂದ್ರಿಯಸ್ತಂಭಕ ಗುಣ (ಟಾನಿಕ) ಗಳು ... ಎಲ್ಲ ತರದ ಅಶಕ್ತತೆ, ಹುಡುಗರು, ಮುದುಕರು ಸಹ ಇದರ ಸೇವನೆಯಿಂದ ಅತಿಶಯ ಗುಣವಾಗಿ ಶರೀರಕ್ಕೆ ಆರೋಗ್ಯವೂ ಕಾಂತಿಯೂ ಬರುವದು. ಒಂದು ಡಬ್ಬಿಗೆ ೬೦ ಗುಳಿಗೆಗಳು ಬೆಲೆ ೨ ರೂ. ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಇದನ್ನು ಸೇವಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸುವದು ಉತ್ತಮ.

ನಪುಂಸಕತ್ವಾರಿ ತೈಲವು.

ಪುರುಷರ ಇಂದ್ರಿಯಕ್ಕೆ ಮರ್ದನ ಮಾಡುವದರಿಂದ ಶಿಥಿಲತೆ, ನಿಬಲತೆ ಮೊದಲಾದವು ನಷ್ಟವಾಗಿ ಇಂದ್ರಿಯಕ್ಕೆ ಬಲ ಬರುವದು. ... ಉಪಯೋಗಿಸುವಾಗ್ಗೆ ಮದನೋತ್ಸವ ಗುಳಿಗೆಯನ್ನು ಉಪಯೋಗಿಸುವದು. ಕಿಮ್ಮತ್ತು ಬಾಟ್ಲಿ ೧ಕ್ಕೆ ೨ ರೂ. ೧೦ ಆಣೆ. ಅನುಪಾನ ಪತ್ರಿಕೆ ಔಷಧದ ಸಂಗಡ. ಟಪಾಲ ಖರ್ಚ ಬೇರೆ. ಸ್ಪಷ್ಟ ತಿಳಿಸುವದು ಉತ್ತಮ.

ವಿಳಾಸ:— ವೈದ್ಯ ಜಿ. ಎಲ್. ಜೋಶಿ. ಮತ್ತು ಕಂಪನಿ

ಸಂ॥ ೯ ಪೋಸ್ಟ ಬನವಾಸಿ, ಉತ್ತರ ಕಾನಡಾ

ಶಿಕ್ಷಕನ ಸಹಾಯವಿಲ್ಲದೆ ಹಾರ್ಮೋನಿಯಮ



ವಾದ್ಯವನ್ನು ಬಾರಿಸಲಿಕ್ಕೆ ಕಲಿಯಬೇಕಾದರೆ— ಪ್ರೊಫೆಸರ ಧಾರವಾಡ ಹಾರ್ಮೋನಿಯಮ ಮಾಸ್ತರ ಇವರು ಹಾರ್ಮೋನಿಯಮ ಶಿಕ್ಷಕವನ್ನು ಕನ್ನಡದಲ್ಲಿ ಮುದ್ರಿಸಿರುತ್ತಾರೆ. ಇದರಲ್ಲಿ ಗೋವಿಂದರಾವ, ಜಾನಕಿಬಾಯಿ ಬಾಲ ಗಂಧರ್ವ, ವಾಸ್ಕರ ಕೃಷ್ಣಾ ಮೊದಲಾದ ಪ್ರಸಿದ್ಧ ಗಾಯನ ನಟರುಗಳ ಪದಗಳ ನೊಟೇಶನ ಮತ್ತು ರಾಗಗಳ ಸರ್ಗಮಗಳನ್ನು ಕೊಟ್ಟಿರುತ್ತದೆ. ಬೆಲೆ ಒಂದೇ ರೂಪಾಯಿ! ಪತ್ರ ಬರೆದವರಿಗೆ ವ್ಹಿ. ಪಿ. ಖರ್ಚ ಬೇರೆ. ಪುಸ್ತಕ ದೊರೆಯುವ

ವಿಳಾಸ— ಪ್ರೊ. ಕೆ. ದೇಸಾಯಿ ಹುಸಿಕಟ್ಟಿ,

ಮಾಳಮಡ್ಡಿ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ಹೊಸಕೇರಿ ಅವರ ಪ್ರೆಸ್ಸಿನಲ್ಲಿ ಛಾಪಿಸಿ ಪ್ರಸಿದ್ಧ ಮಾಡಿದರು.

ಈಜಿಪ್ತವು ಮೂರು ನಿಂತ್ಯ ಕಳ್ಳುವ ಪೆಸಕ್ತು ಬಂದು ?

ಸರದಾರ ೧ ಸ್ಟ್ಯಾಕ ಸಾಹೇಬರ ಕೊಲೆಯಿಂದ ಬ್ರಿಟಿಶ ಸರಕಾರದವರು ಸಂತಾಪಗೊಂಡು ಈಜಿಪ್ತವನ್ನು ಮುಗದಾಳುವಾಕೆ ತಮ್ಮ ಸ್ವಾರ್ಥದ ವಚ್ಚಿಟ್ಟುಕೊಳ್ಳುವಂಥ ಶರ್ತುಗಳನ್ನು ಹೇರಿದ್ದಾರೆ.

೧ ಕೊಲೆಯ ಬಗ್ಗೆ ಕ್ಷಮೆ ಬೇಡಿಕೊಳ್ಳಬೇಕು.

೨ ೫೦ ಲಕ್ಷ ರೂಪಾಯಿ ದಂಡ ತುಂಬಿಕೊಡ್ಬೇಕು.

೩ ರಾಜಕೀಯ ಚಳವಳಿಯನ್ನು ಯಾವ ರೀತಿಯಿಂದಲೂ ನಡಿಸಗೊಡಬಾರದು.

೪ ಸುದಾನದಿಂದ ಈಜಿಪ್ತದ ಶಾಮುದಾರರನ್ನು ಸೈನ್ಯವನ್ನೂ ಹಿಂದಕ್ಕೆ ಕರಿಸಿಕೊಳ್ಳಬೇಕು.

೫ ಅಲ್ಲಿದ್ದ ಸೈನ್ಯವು ಸುದಾನದ ಸರಕಾರದ ಅಧೀನಕ್ಕೊಳಪಡತಕ್ಕದ್ದು.

೬ ಈಜಿಪ್ತದಲ್ಲಿರುವ ಸ್ವಾಮ್ಯ ಮತ್ತು ಲೆಕ್ಕದ ಖಾತೆಗಳಲ್ಲಿರುವ ಯುರೋಪಿಯನ್ನರನ್ನು ಕಾಯಮವಾಗಿಡಬೇಕು.

೭ ಈಜಿಪ್ತದಲ್ಲಿರುವ ಪರಕೀಯರ [illegible]

[illegible]

ಈಜಿಪ್ತದ ದುಸ್ಥಿತಿ !!

[illegible]

ಸುದಾನದಲ್ಲಿ [illegible]

[illegible]

ನಿರ [illegible] ಸಾಹೇಬರ ಕೊಲೆಯಾದ ಕೂಡಲೆ, ಈಜಿಪ್ತದ ಸೈನ್ಯವು ಅಲ್ಲಿಂದ ಹೊರಟಿತ್ತು. [illegible]

ಈಜಿಪ್ತದಲ್ಲಿ ದಬ್ಬಾಳಿಕೆಗೆ ಪ್ರಾರಂಭ

(ಹೊಸ ಸುದ್ದಿಗಳು)

[illegible]

ಸಾಪ್ತಾಹಿಕ **ವಿಜಯ** ಬೆಲೆ ೧ ಆಣೆ

ಸಂಪಾದಕರು- ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೫) ಧಾರವಾಡ ಮಂಗಳವಾರ ತಾರೀಖು ೯ ನೇ ಡಿಸೆಂಬರ ೧೯೨೪ (ಸಂಚಿಕೆ ೪೬

ವಿಜಯ.

ಧಾರವಾಡ ತಾ- ೮-೧೨-೧೯೨೪ನೇ ಇಸ್ವಿ.

ದಬ್ಬಾಳಿಕೆಯು ಬಿಗುವು ಹೆಚ್ಚುತ್ತಿರುವದು.

—o—

ಲಾರ್ಡ ಲಿಟನ ಸಾಹೇಬರು ಸದ್ಯಕ್ಕಾರ ಪಕಡಲ್ಪಟ್ಟಂಥ ೫೦ ಜನ ಯುವಕರನ್ನು ಜೇಲ ಮೊದಲಾದ ಗ್ರಾಮಗಳಲ್ಲಿ ನಜರ ಬಂದಿಯಲ್ಲಿಟ್ಟ ಸಂಗತಿಯಿಂದ ದಬ್ಬಾಳಿಕೆಯ ಬಿಗುವು ದಿನದಿನಕ್ಕೆ ಹೆಚ್ಚಾಗುತ್ತಾ ಹೋಗುವದೆಂದು ಊಹಿಸಲ್ಪಟ್ಟಿತು. ಇದರ ಪೋಲೀಸರು ಸಂಶಯದಿಂದಿಗಳಲ್ಲಿರುವ ಜನರನ್ನು ಸತ ದಸ್ತಗಿರ ಮಾಡಲಿಕ್ಕೆ ಹತ್ತಿದ್ದರಿಂದ, ಈ ಅನ್ಯಾಯತನವು ಬೇಗನೆ ನಿಲ್ಲಬಾರದೆಂದೆನಿಸಿತು. ಇವರ ಮುಖ್ಯ ಕಟಾಕ್ಷವು ಬೆಂಗಾಲ ಪ್ರಾಂತದ ಜನರ ಮೇಲಿರುವದು, ಪ್ರಮುಖರಾದವರ ಮೇಲೆ ವಿಶೇಷವಾಗಿರುವದು ಸಹಜವು. ಕಲಕತ್ತೆಯ ಚೀಫ ಆಫೀಸರಾದ ಶ್ರೀ ಸುಭಾಷಚಂದ್ರ ಬೋಸರು ಸಾಮಾನ್ಯ ಮನುಜರಲ್ಲ. ಇವರ ವಿಷಯವಾಗಿ ಸಿಡೀ ಕಲಕತ್ತೆಯು ಆದರವುಂಟು. ಲಾರ್ಡ ಲಿಟನ ಸಾಹೇಬರು ಕೂಡ ಇವರಿಗೆ ಸುರಂಗದಲ್ಲಿ ಕೂಡು ಕೆಲಸ ಮಾಡಲು ಅಪ್ಪಣೆ ಕೊಟ್ಟಿದ್ದರು. ಕಲಕತ್ತೆಯ ಮ್ಯುನಿಸಿಪಾಲಿಟಿಯವರು ಸರಕಾರವು ಮನಸ್ಸಿನಲ್ಲಿ ಚಿಂತಿಸಿದಂತೆ ಇವರಿಗೆ ರಜೆ ಕೊಡಲು ಒಪ್ಪಿಕೊಳ್ಳಲಿಲ್ಲ. ಸುರಂಗದಲ್ಲಿ ಕೂತೇ ಕೆಲಸ ಮಾಡಬಹುದೆಂದು ಸಮ್ಮತಿ ಪಟ್ಟರು. ಮ್ಯುನಿಸಿಪಾಲಿಟಿಯ ಠರಾವು ಸಾಹೇಬರ ಅಂತಃಕರಣದಲ್ಲಿ ಬಾಣ ನಟ್ಟಂತಾಯಿತು. ಮ್ಯುನಿಸಿಪಾಲಿಟಿಯು ಠರಾವಿಗೆ ಮುಖ್ಯವೇದು ಕಳೆದ ಮಂಗಳವಾರದಿಂದ ಇವರ ಕೆಲಸ ಮಾಡುವ ಪಕ್ಕ ಕಸಕೊಂಡರು. ಹಕ್ಕು ಕಸಕೊಳ್ಳುವದು ಸಾಹೇಬರ ಕಯ್ಯಲ್ಲಿಲ್ಲ. ಕೆಲಸದ ವೇಳೆಯಿಂತ ಇವರ ಭೆಟ್ಟಿಗೆ ಯಾರನ್ನೂ ಬಿಡುವದಿಲ್ಲೆಂದು ಹುಕುಮು ತೆಗೆದಿದ್ದಾರೆ.

ಶ್ರೀ ಸುಭಾಷಚಂದ್ರ ಬೋಸರು ಅಲ್ಲಿಯ ಇಂಗ್ಲಿಷಮನ ಮತ್ತು ಕ್ಯಾಥಲಿಕ ಹೆರಾಲ್ಡ ಪತ್ರಗಳ ಮೇಲೆ ಐವತ್ತೈವತ್ತು ಸಾವಿರ ರೂಪಾಯಿಗಳ ದಾವೆ ಮಾಡಿದ್ದಾರಷ್ಟೇ; ಈ ದಾವೆಯಲ್ಲಿ ಸರಕಾರದ ಆಸೂಯವು ತಾನಾಗಿ ಹೊಂಬೀಳುವದು. ಬೋಸರು ಕ್ರಾಂತಿಕ್ರಾಂತಿ ಪ್ರವರ್ತಕರ ಗುಂಪಿನವರೆಂದು ಸಿದ್ಧಮಾಡಿಕೊಡಬೇಕು, ಇಲ್ಲವಾದರೆ ಲಕ್ಷ ರೂಪಾಯಿಗಳ ಮಾನನಷ್ಟಿಯನ್ನು ತುಂಬಿಕೊಡಬೇಕೆಂಬ ಪ್ರಸಂಗ ಈ ಎರಡೂ ಪತ್ರಗಳಿಗೆ ಬಂದೊದಗಿದೆ. ಸರಕಾರವು ಸರ ಶಿವಸ್ವಾಮಿಯರ ಮೇಲಿನ ಮಾನಹಾನಿಯಲ್ಲಿ ಸರ ಶಿವಸ್ವಾಮಿ ಅಯ್ಯರರಿಗೆ ಆಗದ ಪತ್ರಗಳ ನೆರವು ಕೊಟ್ಟಿತು. ಅದೇ ಪ್ರಕಾರದ ಸಹಾಯವು ಇವರಿಗೂ ದೊರೆಯುವದೆಂದು ಈ ಪತ್ರಗಳು ತಿಳಕೊಂಡಿರಬಹುದು. ಸುಭಾಷಚಂದ್ರರ ದಾವೆಯಿಂದ ಸರಕಾರದ ದಬ್ಬಾಳಿಕೆಯ ಪ್ರಕರಣವು ಕೋರ್ಟಿನ ಮುಂದೆ ಬರುವ ಸಂಭವವಿದೆ. ಅಗ್ಗೆ ದಬ್ಬಾಳಿಕೆಯ ಜಾಹೀರ ಸ್ವರೂಪದ ಅಂತರಂಗವು ಬಿಚ್ಚಿದ ನಿದರ್ಶನಕ್ಕೆ ಬರುವದೆಂದು ನಿರೀಕ್ಷಿಸಬಹುದಾಗಿದೆ.

ಲಾರ್ಡ ಲಿಟನ ಮತ್ತು ದೇಶಬಂಧು ದಾಸರ ವಾಗ್ಯುದ್ಧ.

—o—

ಲಾರ್ಡ ಲಿಟನ ಸಾಹೇಬರು ದಬ್ಬಾಳಿಕೆಯ ಸಮರ್ಥನ ಮಾಡುವದಕ್ಕಾಗಿ ಕಳೆದ ವಾರದಲ್ಲಿ ಮೂರು ಭಾಷಣಗಳನ್ನು ಮಾಡಿದರು. ಮೊದಲಿಗಾಗಿ ಹೋದ ವಾರದಲ್ಲಿ ಒಂದು ಭಾಷಣದ ತಾತ್ಪರ್ಯ ಬರೆದಿದ್ದೇವೆ. ಕಾಯದೆಯಿಂದ ಸಂರಕ್ಷಣೆ ದೊರೆಯುವದಿಲ್ಲದೆ. ಉಳಿದವರಿಗೆ ಕಾಯದೆಯು ಯಾವ ಸಹಾಯವು ದೊರೆಯದೆಂದೂ ಇವರನ್ನು ಬಿಡಬಾರದಂತೆ ತಿಳಿಯುವದೆಂದೂ ಸಾಹೇಬರು ಸ್ಪಷ್ಟವಾಗಿ ಬಿಡಿ ತೋರಿಸಿದ್ದಾರೆ. ಇದರ ತರುವಾಯ " ನಾವು ದೇಶಬಂಧು ದಾಸರಿಗೆ ದಿವಾನಗಿರಿಯ ಆಮಂತ್ರಣ ಕೊಟ್ಟೆವು. ಅವರು ತಾವಾಗಿ ದಿವಾನಗಿರಿಯನ್ನು ಧಿಕ್ಕರಿಸಿದರು. ಅವರು ಮಂತ್ರಿಯಾಗಿ ನಮ್ಮ ಕೂಡ ಸಹಕಾರದಿಂದ ನಡೆದು, ನಮಗೆ ಅವರ ಆಲೋಚನೆ ಬೇಕಿದ್ದರೆ. ಅವರ ಆಲೋಚನೆಯನ್ನು ಸಂತೋಷದಿಂದಾಗಿ ಕೇಳುತ್ತಿದ್ದೆವೆಂದು " ಸಾಹೇಬರು ಅಸೆಂಬ್ಲಿಯಲ್ಲಿ ಭಾಷಣ ಮಾಡಿದ್ದಾರೆ. ಇದಕ್ಕೆ ದೇಶಬಂಧು ದಾಸರು ನಿಷ್ಠುರವಾದ ಉತ್ತರ ಕೊಟ್ಟಿದ್ದಾರೆ. ಅದರ ಅನುವಾದವಿದು-

" ನಾನು ಸರಕಾರದಲ್ಲಿ ಜವಾಬದಾರ ಅಧಿಕಾರವನ್ನು ಅಂಗೀಕರಿಸದಿರುವದಕ್ಕೆ ಅಂಥ ಮಹತ್ವದ ಕಾರಣವುಂಟು. ಗವ್ಹರ್ನರ ಸಾಹೇಬರ ಹಿಡಿತದಲ್ಲಿ ನಾಲ್ವರು ಕೌನ್ಸಿಲರರು ಮತ್ತು ಇಬ್ಬರು ಅಥವಾ ಮೂವರು ಮಂತ್ರಿಗಳಿರುವರು. ಇದರಲ್ಲಿ ಕೌನ್ಸಿಲರರು ಬಹುಮತದಿಂದ ಕೊಟ್ಟ ಅಭಿಪ್ರಾಯದ ವಿರುದ್ಧ ಮತಕೊಡಲು ಮಂತ್ರಿಗಳಿಗೆ ಅಧಿಕಾರವಿರುವದಿಲ್ಲ. ದ್ವಿದಲ ರಾಜ್ಯ ಪದ್ಧತಿಯ ನಾಶ ಮಾಡಬೇಕು ನಾವು ನಿಂತಿದ್ದೇವೆ. ಅನೇಕ ಜನ ಮಂತ್ರಿಗಳು ಈ ಪದ್ಧತಿಯನ್ನು ಹಳಿದಿದ್ದಾರೆ"

ರಾಜ್ಯಕಾರಭಾರದ ಕ್ರಮದಲ್ಲಿ ಪರಸ್ಪರ ವಿರುದ್ಧ ಮತಗಳಿರುವಾಗ ಸಹಾಯದ ಅಪೇಕ್ಷೆ ಮಾಡುವದೇ ವ್ಯರ್ಥ. ಲಾರ್ಡ ಲಿಟನ ಸಾಹೇಬರು ತಮ್ಮಂತೆ ದೇಶಬಂಧು ದಾಸರು ನಡೆಯಬೇಕೆಂದು ಬಯಸುತ್ತಿರುವದೇಕೆ? ಹಿಂದುಸ್ಥಾನದ ಹಿತ ಮಾಡುವದನ್ನು ಅಂತಃಕರಣಪೂರ್ವಕವಾಗಿ ಬಯಸುತ್ತಿದ್ದರೆ ದೇಶಬಂಧುವಿನ ಆಲೋಚನೆಯ ಪ್ರಕಾರ ಏಕೆ ನಡೆಯಬಾರದು? ತಮ್ಮದೇ ಹೆಚ್ಚಿಕೆ ಏಕೆ?

ಸ್ವರಾಜ್ಯ ಕಮಿಟಿಯ ಪ್ರಸಾದ ಚಿನ್ಹವು.

—o—

ಸ್ವರಾಜ್ಯ ಕಾಂಗ್ರೆಸ ಪಕ್ಷದವರು ಹಿಂದುಸ್ಥಾನದ ಭವಿತವ್ಯವನ್ನು ಕುರಿತು ವಿಚಾರ ಮಾಡಲಿಕ್ಕೆಂದು ಕರೆಸಿದ ಸ್ವರಾಜ್ಯ ಕಮಿಟಿಯು ತನ್ನ ರಿಪೋರ್ಟ ಬರೆಯುತ್ತಲಿದ್ದಾರೆ. ಸಾಕ್ಷಿಗಳು ಎಷ್ಟೇ ಕಡುಕಠಿಣವಾಗಲಿ; ಅವುಗಳಿಂದೇನೂ ಪ್ರಯೋಜನವಾಗದೆ, ಮೊದಲಾದ ಬರೆಯುವ ರಿಪೋರ್ಟು ಮೊದಲಿನಂತೆಯೇ ಮುಖ್ಯ ವಿಚಾರಕ್ಕೆ ಪ್ರಮಾಣಭೂತ ವಾಗುತ್ತದೆ. ಈ ರೀತಿಯಾಗಿ ರಿಪೋರ್ಟಿಗೆ ಮಹತ್ವವಿದ್ದು, ಇದರಲ್ಲಿ ಮೆಜಾರಿಟಿ ಮತ್ತು ಮೈನಾರಿಟಿ ಎಂಬ ಭೇದವಿರುತ್ತದೆ. ಮೆಜಾರಿಟಿಯಲ್ಲಿ ಕಾಣಬರುವ ಕಮಿಶನರವರು ಸ್ವದೇಶಿ ಮತ್ತು ಸ್ವಮತ್ವವುಳ್ಳವರಿಲ್ಲ. ಸರಕಾರದವರಿಂದ, ಅಲ್ಲಿಯ ಮೆಜಾರಿಟಿ ರಿಪೋರ್ಟನ್ನು ಸಂತೋಷದಿಂದಾಗಿ ಪ್ರಜಾಜನರು ಅಂಗೀಕರಿಸುವರು. ಆದರೆ ಹಿಂದುಸ್ಥಾನದಲ್ಲಿ ನಡೆಯುವ ಕಮಿಶನಗಳು ಮೊದಲು ಇಂಗ್ಲಿಷ ಜನರ ಹಿತ ನೋಡಿ, ಅನಂತರ ಹಿಂದುಸ್ಥಾನದ ಹಿತ ನೋಡತಕ್ಕವು. ಇದಕ್ಕೆ ಹಲವು ಪ್ರಮಾಣಗಳಿರುವವು. ಸಿವ್ಹಿಲ ಸರ್ವೀಸ ಬಗ್ಗೆ ಲೀಕಮಿಟಿಯ ಪಲ್ಲಟವಾಗುವಂತೆ ಲೀ ಕಮಿಶನದ ಶಿಫಾರಸ್ಸು ತೀರ ಹೊಸದಾಗಿದೆ. ಲೀ ಕಮಿಶನವು ಸಿವ್ಹಿಲ ಸರ್ವಂಟರ ಹೊಟ್ಟೆ ನೆತ್ತಿ ನೋಡಿದಂತೆ, ಸ್ವರಾಜ್ಯದ ಮುಡಿಮನ ಕಮಿಟಿಯು ಅವರ ಅಧಿಕಾರ ಸಾಮ್ರಾಜ್ಯದ ಹಿತ ನೋಡುವದೆಂಬುದು ನಿರ್ವಿವಾದವು. ಆ ಪ್ರಕಾರ ಮುಂದಾಗಿ ಪ್ರಸಾದ ಚಿನ್ಹಗಳು ತೋರಬಹುದು.

ಕಮಿಟಿಯ ರಿಪೋರ್ಟಿನಲ್ಲಿ ಹಿಂದೀ ಜನರ ಬಹುಮತವಾಗುವಂತಿದೆ. ಆದರೆ ಜಿಲ್ಹಾ ದ ಮುಖ್ಯಾಧಿಕಾರಿಗಳು ಮಿ. ಮುಡಿಮನ ಸಾಹೇಬರ ಬಾಬದಲ್ಲಿ ನೇಮಿಸಲ್ಪಟ್ಟಿರುವ ಯುರೋಪಿಯನರ ಮೆಜಾರಿಟಿ ಮತ್ತು ಹಿಂದೀ ಜನರ ಮೈನಾರಿಟಿಯಾಗುವದು. ಸರ ಶಿವಸ್ವಾಮಿ ಅಯ್ಯರರು ಹೆಸರಾದ ಮುತ್ಸದ್ದಿಗಳು. ಮಹಾಳಕರಾದಂತೆ ರಾಜನಿಷ್ಠರು. ಹಳೇ ಕೌನ್ಸಿಲದಲ್ಲಿ ಮಹಾತ್ಮರನ್ನು ಬಂಧಮುಕ್ತ ಮಾಡಬಾರದೆಂದು ಮತ ಕೊಟ್ಟವರು. ಇವರು ಕೂಡ ಮಿ. ಮುಡಿಮನ ಸಾಹೇಬರು ರಿಪೋರ್ಟಿನಲ್ಲಿ ವಾಚಿಸಿದ ದೊರೆಗಳಿಗೆ ಅಸಮ್ಮತಿಪಟ್ಟು ಮೈನಾರಿಟಿ ವರ್ಗವನ್ನು ಕೂಡಿಕೊಂಡಿದ್ದಾರೆ. ಸರ ಸಪ್ರು, ದಾಕ್ತರ ಪರಾಂಜಪೆ, ಬ್ಯಾರಿಸ್ಟರ ಜಿನ್ನಾ ಸರ ಶಿವಸ್ವಾಮಿ ಇವರು ಬರೆಯುವ ಮೈನಾರಿಟಿ ರಿಪೋರ್ಟಿಗೆ ಲಾರ್ಡ ರೀಡಿಂಗರಾಗಲಿ, ಲಾರ್ಡ ಬರ್ಕನಹೆಡ್ಡರಾಗಲಿ ಎಷ್ಟರ ಮಟ್ಟಿಗೆ ಮಾನ ಕೊಡುವರೆಂಬದನ್ನು ಹೇಳತಕ್ಕ ಅವಶ್ಯಕತೆ ಇಲ್ಲ.

ಮೈನಾರಿಟಿಯವರು ಹಿಂದು ರಾಯಲ ಕಮಿಶನ ನೇಮಿಸಿ, ರಾಜ್ಯಕಾರಭಾರದೊಳಗಿನ ದೋಷಗಳನ್ನು ತೆಗೆದು ಹಾಕಿ, ದ್ವಿದಲ ಪದ್ಧತಿಯನ್ನು ನಿರ್ಮೂಲ ಮಾಡಿ, ಇಂತಿಷ್ಟು ವರ್ಷಗಳಲ್ಲಿ ಸ್ವರಾಜ್ಯ ಸ್ವಾತಂತ್ರ್ಯದ ಹಕ್ಕುಗಳನ್ನು ಪೂರ್ಣ ಮಾಡುತ್ತೇವೆಂದು ನಿಶ್ಚಿತವಾಗಿ ಹೇಳಬೇಕೆಂದು ತಮ್ಮ ರಿಪೋರ್ಟಿನಲ್ಲಿ ಬರೆಯುವರು. ಈ ರಿಪೋರ್ಟು ಲೀ ಕಮಿಶನದ ಶಿಫಾರಸ್ಸಿಗೆ ವಿರುದ್ಧವಾಗುವದು. ಗೋರಕಾಯ ಮತ್ತು ಕೃಷ್ಣನಾಯರವರ ನಡುವೆ ಎಷ್ಟು ಏನೇನಿದರೆ ಕೋಣ ಕರಗಳೆಂತೆಂದು ಹೇಳುವಷ್ಟು ಮನಭೇದವಿರುವಾಗ, ಕೃಷ್ಣನಾಯರವರ ನಡಿಯು ವಿಲಾಯತಿಯ ಮಂತ್ರಿಗಳಿಗೆ ಹೇಗೆ ಸಮ್ಮತವಾದೀತು?

ಗುಪ್ತ ತೋಳಿ, ಇಲಿ ತೆಗೆಯುವಿಕೆ

—o—

ಸಿಮುಲಾದ ಸ್ವರಾಜ್ಯ ಕಮಿಟಿಯಲ್ಲಿ ಯುರೋಪಿಯನ ಮೆಂಬರರ ಬಹುಮತವಿದ್ದು ಅವರು ಮಾಡುವ ರಿಪೋರ್ಟು ವಿಲಾಯತಿ ಸರಕಾರಕ್ಕೆ ದೇವವಾಕ್ಯವಾಗುವದೆಂಬ ಸಂಗತಿಯನ್ನು ಈ ಮೊದಲು ಬರೆದಿದ್ದೇವೆ. ಈ ಕಮಿಟಿಯವರು ಸರಕಾರಕ್ಕೆ ಮಾಡುವ ಶಿಫಾರಸ್ಸು ಹಿಂದೀ ಜನರ ಪಾಲಿಗೆ ಗುಪ್ತ ತೋಳಿ. ಇಲೀ ತೆಗೆದಂತಾಗುತ್ತದೆಂದು ಸಿಮುಲಾದಿಂದ ಲಂಡನಕ್ಕೆ ಹೋದ ಒಂದು ತಾರು ಹೇಳುತ್ತದೆ. ಸ್ವರಾಜ್ಯ ಪಕ್ಷೀಯರು ಕೌನ್ಸಿಲವನ್ನು ಮುರಿದಿರುವರು. ಮಂತ್ರಿಯ ಸಂಬಳಕ್ಕೆ ಕೇರು ಹಾಕಿದ್ದಾರೆ. ಕೌನ್ಸಿಲದ ಅಧ್ಯಕ್ಷರ ಮೇಲೆ ಹಾಯಿಕೋರ್ಟಿನಲ್ಲಿ ದಾವೆ ಮಾಡಿದ್ದಾರೆ. ಇದ್ದರಿಂದ ಇನ್ನು ಸ್ವರಾಜ್ಯ ಪಕ್ಷೀಯರಿಗೆ ಇಂಥ ಕೃತ್ಯಗಳನ್ನು ಮಾಡಲಿಕ್ಕೆ ಬಾರದಂತೆ ಕಾಯದೆಯೊಂದ ಬಂದೋಬಸ್ತು ಮಾಡುವರು. ಮತ್ತು ಹಿಂದೀಜನರ ಬಾಯಿಗೆ ತಕ್ಕರೆಯೊರಿಸುವಂತೆ ಒಂದೆರಡು ಇಲಾಖೆಗಳ ಮಂತ್ರಿಗಳಿಗೆ ಒಂದೆರಡು ಹಂಚಿಗಳನ್ನು ಚೆಲ್ಲಿಗೆ ಕೊಡುವರೆಂದು ಈ ತಾರಿನ ಸಾರಾಂಶವಾಗಿರುತ್ತದೆ. ಕಮಿಟಿಯ ಶಿಫಾರಸ್ಸಿನಂತೆ ವಿಲಾಯತಿ ಸರಕಾರದವರು ನಡೆಯುವದಾದರೆ- ಕುಂಭಕರ್ಣನಂತೆ ಮಲಗಿದ ಅಸಹಕಾರವನ್ನು ತಾನಾಗಿ ಹೊಡೆದು ಎಬ್ಬಿಸಿದಂತಾಗುವದು.

ಮೈಸೂರಿನಲ್ಲಿ ಆಯುರ್ವೇದ ಕಾಲೇಜ.

—o—

ಮೈಸೂರ ಪಟ್ಟಣದಲ್ಲಿ ಆಯುರ್ವೇದ ಪಾಠಶಾಲೆಯುಂಟು. ಇದನ್ನು ಇಂಗ್ಲಿಷ ವೈದ್ಯಕೀಯ ಕಾಲೇಜದಷ್ಟು ಯೋಗ್ಯತೆಗೆ ತರಬೇಕೆಂದು ಯುನಿವ್ಹರ್ಸಿಟಿಯು ಸಿನೇಟ ಸಭೆಯಲ್ಲಿ ಶ್ರೀ ರಾಮಚಂದ್ರರಾಯರು ಒಂದು ಠರಾವು ತಂದರು. ಈ ಠರಾವಿಗೆ ಸಿನೇಟದ ಮೆಂಬರರಾದ ಡಾಕ್ಟರ ಜನರೂ ಸಮ್ಮತಿ ಕೊಟ್ಟರು. ಸರಕಾರ ಮತ್ತು ಯುನಿವ್ಹರ್ಸಿಟಿ ಸೇರಿ, ಪಾಠಶಾಲೆಯನ್ನು ಕಾಲೇಜದ ಯೋಗ್ಯತೆಗೆ ತರಬೇಕೆಂದು ಶ್ರೀ ರಾಮಚಂದ್ರರಾಯರ ಠರಾವಿನ ಆಶಯವಾಗಿತ್ತು. ಆ ಪ್ರಕಾರ ವಿಚಾರ ಮಾಡಲು ಈ ವಿಷಯವನ್ನು ಒಂದು ಕಮೀಟಿಗೆ ಒಪ್ಪಿಸಬೇಕೆಂದು ಠರಾವು ಪಾಸಾಯಿತು.

ದೇಶಬಂಧು ದಾಸರು ಮರಣಪತ್ರ ಬರೆದರು

ದೇಶಬಂಧು ದಾಸರು ತಮ್ಮ ಜೀವದಿಗೆಯ ಮೇಲೆ ತುಳಸೀ ಪತ್ರವನ್ನಿಟ್ಟು ಅದನ್ನು ದೇಶಾದಾಯ ಧರ್ಮಾದಾಯಕ್ಕೆ ಕೊಟ್ಟರು ಇವರ ಆಸ್ತಿಯೊಳ ಬರುವ ಉತ್ಪನ್ನದಿಂದ—

೧ ಸ್ತ್ರೀಯರ ಇಂಗ್ಲಿಷ ಕಾಲೇಜ.

೨ ಸಂಸ್ಕೃತ ಪಾಠಶಾಲೆ

೩ ಮತ್ತು ಸ್ವಂತ ಮನೆಯಲ್ಲಿ ಶ್ರೀ ಕೃಷ್ಣನ ನಿತ್ಯಪೂಜೆ ಮತ್ತು ನೈವೇದ್ಯ

ನಡೆಯತಕ್ಕದ್ದೆಂದು ಗೊತ್ತುಮಾಡಿದ್ದಾರೆ

ಮುಂಬಯಿಯಲ್ಲಿ ಲಾರ್ಡ ರೀಡಿಂಗ ಸಾಹೇಬರ ಸ್ವಾಗತ ಮತ್ತು ದರಬಾರಗಳು

—o—

ಲಾರ್ಡ ರೀಡಿಂಗ ಸಾಹೇಬರು ಹೋದ ಮಂಗಳವಾರದ ದಿವಸ ಮುಂಬಯಿಗೆ ಬಂದರು. ಅಧ್ಯಕ್ಷರು ಇವರ ಸ್ವಾಗತಕ್ಕೆ ಹೋಗಬೇಕೆಂದು ಮುನ್ಸಿಪಲ ಮುನಿಸಿಪಾಲಿಟಿಯಲ್ಲಿ ಠರಾವಾಗಿದ್ದರೂ, ಅವರು ಸ್ಟೇಶನಕ್ಕೆ ಹೋಗಲಿಲ್ಲ. ಇವರಂತೆ ರಾಷ್ಟ್ರೀಯ ಪಕ್ಷದವರು ಸ್ವಾಗತ ಮತ್ತು ಮುಖ್ಯ ಸಮಾರಂಭಗಳಿಗೆ ಬಹಿಷ್ಕಾರ ಹಾಕಿ, ಅವಕ್ಕೆ ಹೋಗಲಿಲ್ಲ. ಮಂಡಲ, ರಾಜಪುತ್ರರು, ಸರಕಾರಿ ಕಾಮದಾರರು, ರಾಜನಿಷ್ಠರು ಇವರ ಅಬ್ಬರವೇ ಆಗಿತ್ತು. ರಾಷ್ಟ್ರೀಯರು ನಾಗರೀಕರೂ ಮೆರವಣಿಗೆ ಮುಂತಾದವುಗಳನ್ನು ನೋಡಲಿಕ್ಕೆ ಹೋಗಲಿಲ್ಲ.

ಮಹಾತ್ಮರು ಇಂದು ಅಮೃತಸರ ಹಿಂದೂವರು ಇವರಿಗೆ ಮಾನಪತ್ರಕೊಡಬೇಕೆಂದು ಮುನಿಸಿಪಾಲಿಟಿಯಲ್ಲಿ ವಿಷಯ ಹೊರಟಿತು. ಮಹಾತ್ಮರು ಎಷ್ಟು ದೊಡ್ಡವರಾದರೂ, ಅವರ ಅಸಹಕಾರ ಮತ್ತು ಕಾಯದೆಭಂಗವು ತಮಗೆ ಒಪ್ಪಿಗೆಯಾಗಿರುವದಿಲ್ಲೆಂದು ಮ.ವಾಳ ಮತ್ತು ಸರಕಾರ ಪಕ್ಷದ ಮೆಂಬರರು ವಾದಿಸಿ, ಬಹುಮತದಿಂದ ಮಾನಪತ್ರದ ವಿಷಯವನ್ನು ನಿರಾಕರಿಸಿದರು. ಊರ ಜನರು ಸಾರ್ವಜನಿಕ ಸಭೆಮಾಡಿ, ಇವರ ಕೃತ್ಯವನ್ನು ನಿಷೇಧಿಸಿದರು.

ಹಿಂದುಸ್ಥಾನದ ಕಳ್ಳಿದ್ದಲಿಯ ವ್ಯಾಪಾರ ಬೆಳೆಯುವದಕ್ಕೆ ಹೇಗೆ ಉತ್ತೇಜನಕೊಡಬೇಕೆಂದು ಸರಕಾರದವರು ಒಂದು ಕಮೀಟಿ ನೇಮಿಸಿದ್ದು, ಈ ಕಮಿಟಿಯ ವಿಚಾರಣೆಯು ಮುಗಿಯುತ್ತಾ ಬಂದಿದೆ. ಇಷ್ಟರಲ್ಲಿ ಸರಕಾರದವರು ಸಕ್ಕರದ ಕಾಲಿನೆಯ ಕೆಲಸಕ್ಕೆ ದಕ್ಷಿಣ ಆಫ್ರಿಕೆಯ ಇದ್ದಲಿಯನ್ನು ಕೊಳ್ಳುವಂತೆ ಕಾಂಟ್ರ್ಯಾಕ್ಟು ಕೊಟ್ಟಿದ್ದಾರೆ.

ಲಾರ್ಡ ರೀಡಿಂಗಸಾಹೇಬರಿಗೆ ಬ್ರಾಹ್ಮಣೇತರರ ಮಾನಪತ್ರವು.

—o—

ಮಹಾರಾಷ್ಟ್ರ ಮತ್ತು ಕರ್ನಾಟಕದ ಬ್ರಾಹ್ಮಣೇತರರು ನಾಮದಾರ ಲಾರ್ಡ ರೀಡಿಂಗ ಸಾಹೇಬರಿಗೆ ಮಾನಪತ್ರವನ್ನು ಕೊಟ್ಟರು. ಮಾನಪತ್ರದಲ್ಲಿಯ ಮುಖ್ಯ ಬೇಡಿಕೆಗಳು ಕೆಳಗೆ ಕೊಟ್ಟಂತಿರುತ್ತವೆ.

೧ ಬ್ರಾಹ್ಮಣೇತರರೆಂದರೆ ಲಕ್ಷಾವಧಿ ಹುಸಿಕ ಪ್ರಾಣಿಗಳು. ಇವರ ಜನಸಂಖ್ಯೆಯು ನೂರಕ್ಕೆ ೯೦ ರಷ್ಟಿದೆ. ಇತ್ತೀಚಿನ ಉದಾರ ಶಿಕ್ಷಣದ ಪ್ರಭಾವದಿಂದ ಕೊಲ್ಹಾಪೂರದ ಗತಿಸಿದ ಮಹಾರಾಜರಂಥ ನರ ರತ್ನಗಳು ಬ್ರಾಹ್ಮಣೇತರರಲ್ಲಿ ಜನಿಸಿದವು.

೨ ಬ್ರಾಹ್ಮಣೇತರರು ಮುರುಗುವಂಥ ಸ್ಥಿತಿಯಲ್ಲಿದ್ದರೂ, ಕ್ರಮೇಣ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಿದ್ದಾರೆ. ಇವರಲ್ಲಿ ಜಾಗೃತಿಯೂ ಹುಟ್ಟಿದೆ. ಸರಕಾರದ ಸಹಾಯದಿಂದ ಶಿಕ್ಷಣದಲ್ಲಿ ಮುಂದೆ ಹೋದ ಜನರ ಯೋಗ್ಯತೆಗೆ ಬರುವಂತೆ ಪ್ರಯತ್ನಿಸುತ್ತಿದ್ದಾರೆ.

೩ ಹೊಸಸುಧಾರಣೆಯ ಪೂರ್ವದಲ್ಲಿ ಬ್ರಾಹ್ಮಣೇತರರೇ ಸರಕಾರದ ಹೆಚ್ಚಿನ ಕರವನ್ನು ಕೊಡುತ್ತಿದ್ದರೂ, ಕೌನ್ಸಿಲಗಳಲ್ಲಿ ಇವರ ನಿಜವಾದ ಪ್ರತಿನಿಧಿಗಳಿಗೆ ಅವಕಾಶ ಸಿಗುತ್ತಿದ್ದಿಲ್ಲ. ರಿಫಾರ್ಮ ಆಕ್ಟಿನಿಂದ ಪ್ರತ್ಯಕ್ಷ ಚುನಾವಣೆಯ ಅಧಿಕಾರ ಸಿಕ್ಕ ಮರಾಠಾ ಮತ್ತು ಅವರಿಗೆ ಸಂಬಂಧಿಸಿದ ಜನರಿಗಾಗಿ ಕೆಲವು ಸ್ಥಳಗಳನ್ನು ಕಾದಿಟ್ಟಿದ್ದರಿಂದ, ಇವರಿಗೆ ಉತ್ತೇಜನ ಸಿಕ್ಕಿರುತ್ತದೆ ಮತ್ತು ಈ ಮೇರೆ ರಿಂದ ಸರಕಾರಕ್ಕೆ ಸಹಾಯವೂ ದೊರೆದಿರುತ್ತದೆ.

೪ ಕೌನ್ಸಿಲದಲ್ಲಿ ಜಾತಿವಾರ ಪ್ರತಿನಿಧಿಗಳನ್ನು ಆರಿಸುವದಕ್ಕಾಗಿ ಕೊಟ್ಟ ಹಕ್ಕು ಅಲ್ಪವಾಗಿದೆ. ಇವರ ಐತಿಹಾಸಿಕ ಮಹತ್ವ ಮತ್ತು ಇವರು ಕೊಡುವ ಕರಕಂದಾಯಕ್ಕನುಸರಿಸಿ, ಚುನಾವಣೆಯ ಪ್ರಮಾಣ ಇರುವದಿಲ್ಲ. ಆದ್ದರಿಂದ ಚುನಾವಣೆಯ ಅಧಿಕಾರವನ್ನು ಹೆಚ್ಚಾಗಿ ದಯಪಾಲಿಸಬೇಕು.

೫ ಶಿಕ್ಷಣದ ವಿಷಯವಾಗಿ ನಮ್ಮ ಜನರು ಬಹಳ ಕಷ್ಟಪಡುತ್ತಿರುವರು. ಮುಂಬಯಿ ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದಿಂದ ಕೊಡಬೇಕೆಂದಿದ್ದರೂ, ಇದು ಒಂದು ದಿವಸದ ಕೆಲಸವಲ್ಲ. ನಿದ್ರೆ ಮಾಡುತ್ತಿದ್ದ ಜನಾಂಗವನ್ನು ಎಚ್ಚರಿಸಲಿಕ್ಕೆ ಅನೇಕ ವರ್ಷಗಳು ಬೇಕಾಗುವವು. ಆದ್ದರಿಂದ ಶಿಕ್ಷಣವಿಷಯವಾಗಿ ಸ್ಪೇಶಲ ಅನುಕೂಲಗಳನ್ನು ಒದಗಿಸಿ ಕೊಡಬೇಕು.

೬ ಬ್ರಾಹ್ಮಣೇತರ ತರುಣರಿಗೆ ಸರಕಾರೀ ಕೆಲಸಗಳಲ್ಲಿ ಪ್ರವೇಶ ದೊರೆಯುವದು. ಮುಂಬಯಿ ಗವ್ಹರ್ನರರಾದ ನಾಮದಾರ ಲಾಯಿಡ ಸಾಹೇಬರು ಈ ವಿಷಯವಾಗಿ ವಿಶೇಷವಾದ ಆಸಕ್ತಿ ತೋರಿಸಿರುವರು. ದೊಡ್ಡ ಹುದ್ದೆಗಳನ್ನು ಪೂರ್ಣ ಮಾಡುವ ಮುಂಚೆಯಾಗಿ ಸಣ್ಣ ಹುದ್ದೆಗಳನ್ನು ಪೂರ್ಣ ಮಾಡಬೇಕೆಂಬ ವಿನಂತಿಯು. ಇಂಪೀರಿಯಲ ಸರ್ವೀಸದಲ್ಲಿ ನಮ್ಮ ಜನರ ಸಂಖ್ಯೆಯು ಅತ್ಯಲ್ಪವಾಗಿದೆ. ಪ್ರತ್ಯಕ್ಷ ಮತ್ತು ಪ್ರಾಂತಿಕ ಅಧಿಕಾರಪದವಿಗೆ ಯೋಗ್ಯ ಜನರನ್ನು ಆ ಸರ್ವಿಸದಲ್ಲಿ ಸೇರಿಸಬೇಕು.

೭ ವಿಲಾಯತಿಯಲ್ಲಿರುವ ಸ್ಯಾಂಡಹರ್ಸ್ಟದ ಮಿಲಿಟರಿ ಶಿಕ್ಷಣದ ಕಾಲೇಜದಲ್ಲಿಯೂ ಬ್ರಾಹ್ಮಣೇತರರಿಗೆ ಪ್ರವೇಶ ದೊರೆಯಬೇಕು. ಕ್ಷತ್ರಿಯರಾದವರಿಗೇ ಈ ಕಾಲೇಜದಲ್ಲಿ ಕಲಿಯಲು ಸಾಧ್ಯವಿರುವದು. ಬಹುಜನರಿಗೆ ಇರುವದಿಲ್ಲ. ಶಿಕ್ಷಣವು ಬಹಳ ವೆಚ್ಚದ್ದಾಗಿದ್ದರಿಂದ ಅವಲಂಬಿಸಬಾರದು. ಬಡವರಿಗಾಗಿ ಸ್ಕಾಲರಶಿಪ್ಪು ಕೊಡಬೇಕು.

ಈ ಮಾನಪತ್ರಕ್ಕೆ ಸಾಹೇಬರು ಉತ್ತರಕೊಟ್ಟದ್ದೇನಂದರೆ—

೧ ಎಲ್ಲರಿಗೂ ಸಮವಾಗಿ ಹಕ್ಕು ದೊರೆಯಬೇಕು, ಆ ಎಲ್ಲರಿಗೂ ಕೆಲಸ ಮಾಡುವ ಸಂಧಿಯು ದೊರೆಯಬೇಕೆಂಬುದೇ ಬ್ರಿಟಿಶ ರಾಜನೀತಿಯು ಮುಖ್ಯೋದ್ದೇಶವಾಗಿರುತ್ತದೆ. ಶಿಕ್ಷಣ ಪ್ರಸಾರ ಮಾಡಿ, ರಾಜ್ಯಕಾರಭಾರದಲ್ಲಿ ಪ್ರಜರ ಜವಾಬದಾರಿಯನ್ನು ಹೆಚ್ಚಿಸಿ ಅವರಿಗೆ ಕೆಲಸಗಳನ್ನು ಕೊಡುವದು ಹಿಂದುಸ್ಥಾನ ವಿಷಯವಾದ ಬ್ರಿಟಿಶ ಆಡಳಿತೆಯ ಕ್ರಮವಾಗಿದೆ. ನಾವು ವಿಲಾಯತಿಯಲ್ಲಿ ಅನುಭವಿಸುವಂಥ ಉತ್ಕೃಷ್ಟ ಅಧಿಕಾರವನ್ನು ಹಿಂದುಸ್ಥಾನದಲ್ಲಿಯ ಜನರೂ ಶಿಕ್ಷಣ ಪ್ರಭಾವದಿಂದ ತಮ್ಮ ದೇಶದಲ್ಲಿ ಅನುಭೋಗಿಸುವಂತೆ ಮಾಡುವದೇ ನಮ್ಮ ಕಣ್ಣುಂದೆ ಕಟ್ಟಿರುತ್ತದೆ.

೨ ಹೊಸ ಕೌನ್ಸಿಲಗಳಲ್ಲಿ ಕೆಲವು ಜನಾಂಗಗಳಿಗೆ ಚುನಾವಣೆಯ ಸ್ಪೇಶಲ ಹಕ್ಕು ಕೊಟ್ಟಿದ್ದೇವೆ. ಮರಾಠರಿಗಾಗಿ ಮುಂಬಯಿ ಕೌನ್ಸಿಲದಲ್ಲಿ ಏಳು ಸ್ಥಳಗಳನ್ನು ಕಾದಿಟ್ಟಿದ್ದೇವೆ. ಮರಾಠರೂ ಇತರ ಬ್ರಾಹ್ಮಣೇತರರೂ ಒಂದಾದರೆ ಅವರ ಬಹುಮತವೇ ಆಗಿ, ಚುನಾವಣೆಯಲ್ಲಿ ತಮ್ಮ ಜನರನ್ನೇ ಆರಿಸಬಹುದಾಗಿರುತ್ತದೆ. ಆದ್ದರಿಂದ ಲೋಕಕರ್ತವ್ಯವನ್ನು ಹೆಚ್ಚಾಗಿ ಮಾಡುವ ಪ್ರಸಂಗಗಳು ನಿಮ್ಮ ಕೈಯ್ಯಲ್ಲುಂಟು.

೩ ಶಿಕ್ಷಣವು ಈಗ ಪ್ರಾಂತಿಕ ಸರಕಾರದ ವಿಷಯವಾಗಿದೆ. ಮುಂಬಯಿಯ ಗವ್ಹರ್ನರರು ನಿಮ್ಮ ಬೇಡಿಕೆ ಕೋರಿಕೆಗಳ ವಿಷಯವಾಗಿ ದಕ್ಷರಾಗಿದ್ದಾರೆಂಬುದನ್ನು ಸಂಪೂರ್ಣವಾಗಿ ತಿಳಿದು ನಿಮ್ಮ ಧ್ಯೇಯ ಪೂರ್ಣವಾಗಬೇಕಾದರೆ ನಿಮ್ಮ ತರುಣರಲ್ಲಿ ಶಿಕ್ಷಣ ಪ್ರಸಾರವು ಹೆಚ್ಚಾಗಲಿಕ್ಕೆ ಬೇಕು. ಈ ಕೊರತೆಯನ್ನು ಪೂರ್ಣ ಮಾಡಲು ನೀವು ಲಕ್ಷ್ಯ ಹಾಕುತ್ತಿರುವದನ್ನು ಕಂಡು ನನಗೆ ಆನಂದವಾಗಿರುತ್ತದೆ.

೪ ನಿಮ್ಮ ಜನರಿಗೆ ಕೆಲಸ ಕೊಡುವದು ಇದು ಪ್ರಾಂತಿಕ ಸರಕಾರದ ಕೆಲಸವಾಗಿದೆ. ೧೯೨೩ ನೇ ಇಸವಿಯಲ್ಲಿ ಮುಂಬಯಿ ಸರಕಾರದವರು ಒಂದು ಸರಕ್ಯುಲರ ಕೂಡ ತೆಗೆದಿದ್ದಾರೆ. ಇದೇ ವಿಷಯವಾಗಿ ಸರ ಲಿಸ್ಲಿನ ಸಾಹೇಬರು ಧಾರವಾಡದಲ್ಲಿ ಬ್ರಾಹ್ಮಣೇತರರು ಕೊಟ್ಟಂಥ ಮಾನಪತ್ರಕ್ಕೆ ಉತ್ತರ ಕೊಟ್ಟಿದ್ದಾರೆ. ಇಂಪೀರಿಯಲ ಸರ್ವೀಸದಲ್ಲಿ ಸೇರಿಸಿಕೊಳ್ಳುವ ವಿಷಯವಾಗಿ ಸರಕಾರದಲ್ಲಿ ವಿಚಾರ ನಡೆದಿದೆ.

೫ ಸ್ಯಾಂಡಹರ್ಸ್ಟ ಕಾಲೇಜದಲ್ಲಿ ಲಷ್ಕರೀ ಶಿಕ್ಷಣ ಕೊಡುವ ವಿಷಯವಾಗಿ ಮುಂಬಯಿ ಗವ್ಹರ್ನರರ ಹಾಗು ಕೊಲ್ಹಾಪೂರದ ಮಹಾರಾಜರ ಕೂಡ ಪತ್ರವ್ಯವಹಾರ ನಡೆಸಿದ್ದೇನೆ. ವಿಲಾಯತಿಯಲ್ಲಿ ಈ ಕಾಲೇಜದಲ್ಲಿ ಶಿಕ್ಷಣ ಪಡೆಯತಕ್ಕವರಾಗಿ ಸ್ಕಾಲರಶಿಪ್ಪುಗಳಿರುವದಿಲ್ಲ. ಈ ಸಂಗತಿಯನ್ನು ಕೊಲ್ಹಾಪೂರದ ಮಹಾರಾಜರಿಗೆ ತಿಳಿಸಿದ್ದೇವೆ. ಶ್ರೀಮಂತ ಜನರು ಉದಾರ ಹಸ್ತದಿಂದ ದ್ರವ್ಯಸಹಾಯ ಮಾಡಿ ತರುಣರನ್ನು ಈ ಕಾಲೇಜಕ್ಕೆ ಕಳಿಸಬೇಕು. ಹಿಂದುಸ್ಥಾನದಲ್ಲಿ ಕ್ಷಾತ್ರ ಧರ್ಮದ ಅನೇಕ ಕುಲಗಳಿದ್ದು, ಇವೆಲ್ಲಕ್ಕೂ ಸರಕಾರದಿಂದ ಸಹಾಯ ದೊರೆಯುವದು ಶಕ್ಯವಲ್ಲ.

—

ಶಾಲೆಗಳಲ್ಲಿ ರಾಟಿಯ ಪ್ರವೇಶ.

—o—

ಮದ್ರಾಸ ಸರಕಾರದ ಒಪ್ಪಿಗೆ.

—o—

ಮದ್ರಾಸದ ಕಾಯದೆ ಕೌನ್ಸಿಲಗಳಲ್ಲಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ರಾಟಿಯ ಶಿಕ್ಷಣ ಕೊಡಬಹುದೇ ಎಂಬ ಪ್ರಶ್ನ ಹೊರಟಿತು. ಕೆಲ ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡನವರು, ಪ್ರಾಥಮಿಕ ಶಾಲೆಗಳಲ್ಲಿ ನೂಲುವ ಶಿಕ್ಷಣವನ್ನು ಒತ್ತಾಯದಿಂದ ಕಲಿಸಬೇಕೆಂಬ ಠರಾವು ಮಾಡಿದ್ದರು. ಈ ಠರಾವು ಸರಕಾರಕ್ಕೆ ಇಷ್ಟವೇ ಎಂದು ಮಾಡಿದ ಪ್ರಶ್ನಕ್ಕೆ ಸರಕಾರದವರು ಕೆಳಗೆ ಕೊಟ್ಟಂತೆ ಉತ್ತರ ಕೊಟ್ಟಿದ್ದಾರೆ.

“ಶಾಲೆಗಳಲ್ಲಿ ರಾಟಿಯ ಶಿಕ್ಷಣ ಕೊಡುವದಕ್ಕಾಗಿ ಡೈರೆಕ್ಟರ ಬೋರ್ಡಿನ ಮಂಜೂರಿಯು ಸಾಕು. ವಿದ್ಯಾಖಾತೆಯ ಡಾಯರೆಕ್ಟರರ ಮಂಜೂರಿಯ ಅವಶ್ಯಕತೆಯು ಕಾರಣವಿಲ್ಲ.”

ಸರಕಾರದವರು ಸಾಮಾನ್ಯವಾಗಿ ಮಂಜೂರಿ ಕೊಟ್ಟ ನಂತರ, ರಾಜಕೀಯ ಚಳವಳಿಯನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು, ರಾಟಿಯ ಶಿಕ್ಷಣ ಕೊಡುವದು ಮಾತ್ರ ಆಕ್ಷೇಪಾರ್ಹವಾಗುತ್ತದೆಂದು ಮಂತ್ರಿಗಳು ರಾಷ್ಟ್ರೀಯ ಪಕ್ಷದ ಮೇಲೆ ಟೀಕೆ ಮಾಡಿದರು. ರಾಜಕೀಯ ಚಳವಳಿಗೂ ರಾಟಿಯ ಶಿಕ್ಷಣಕ್ಕೂ ಸಂಬಂಧವೇನೆಂದು ಶ್ರೀ ಸತ್ಯಮೂರ್ತಿಯವರು ಪ್ರಶ್ನೆ ಮಾಡಲು, ಮಂತ್ರಿಗಳು ಹಾರಿಸಿಕೊಳ್ಳುವ ಉತ್ತರ ಕೊಟ್ಟರು. ಈ ವಿಚಾರವು ಹೇಗೇ ಇರಲಿ; ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ನೂಲುವ ವಿದ್ಯೆ ಕಲಿಸಬಹುದೆಂದು ಸರಕಾರದವರು ಕೊಟ್ಟ ಸಮ್ಮತಿಯು ರಾಷ್ಟ್ರೀಯ ಪಕ್ಷದ ದಿಗ್ವಿಜಯವಾಗುತ್ತದೆ.

—

ಕರ್ನಾಟಕದ ಏಕೀಕರಣವು

—o—

ಕಾಂಗ್ರೆಸದ ವೇಳೆಯಲ್ಲಿ ಕೂಡುವ ಅನೇಕ ಪರಿಷತ್ತುಗಳ ಕೂಡ, ಕರ್ನಾಟಕದ ಏಕೀಕರಣದ ವಿಚಾರ ಮಾಡಲೋಸುಗ ಕನ್ನಡಿಗರ ಒಂದು ಪರಿಷತ್ತನ್ನು ಕೂಡಿಸಬೇಕೆಂದು ಶ್ರೀ. ರಾಘವೇಂದ್ರರಾವ ಕಡಪಾ ದೊಡ್ಡವಾದ ಕೇಲವರು ವಿಚಾರ ಮಾಡಿ, ಈ ಬಗ್ಗೆ ಮುಂದಾಗಿ ಜಾಹೀರ ವಿನಂತಿ ಪತ್ರವನ್ನು ಪ್ರಸಿದ್ಧ ಮಾಡಿ, ಸಮಸ್ತ ಕನ್ನಡಿಗರ ಸಹಾಯವನ್ನು ಕೋರಬೇಕೆಂದು ಮಾಡುತ್ತಿರುವ ಪ್ರಯತ್ನವು ಸ್ತುತ್ಯವಾಗಿರುತ್ತದೆ. ಬಾಗಲಕೋಟೆಯ ಶ್ರೀ. ಶ್ರೀನಿವಾಸರಾವ ಮಂಗಳವೇಢೆಕರ ಮತ್ತು ಇಲ್ಲಿಯ ಶ್ರೀ. ಶಂಕರರಾವ ಬಾಳಕೃಷ್ಣ ಜೋಶಿಯವರು ಸದ್ಯದಲ್ಲಿ ಕಾರ್ಯದರ್ಶಿಯರಾಗಿದ್ದಾರೆ.

ಕರ್ನಾಟಕವು ಒಮ್ಮೆ ವೈಭವದ ಶಿಖರಕ್ಕೆ ಮುಟ್ಟಿದ್ದರೂ, ಮುಸಲಮಾನ ಹಾಗು ಮರಾಠರ ದೊರೆತನದಲ್ಲಿ ಸಿಕ್ಕು ಕರ್ನಾಟಕವೆಂಬ ಹೆಸರೇ ಮುಳುಗಿತು. ಮದ್ರಾಸ ಇಲಾಖೆಯಲ್ಲಿ ಇಂಗ್ಲಿಷರ ಕೆಲವು ದೇಶೀಯ ಪಲಟಣಗಳಿಗೆ ಕರ್ನಾಟಿಕ ಕಂಪನಿ ಎಂಬ ಹೆಸರಿರುವದು. ಹೆಸರು ಕರ್ನಾಟಕವಾದರೂ, ಇರುವದು ತೈಲಂಗಣದಲ್ಲಿ. ಸೈನಿಕರಲ್ಲಿ ಒಬ್ಬನಾದರೂ ಕನ್ನಡಿಗನಿರುವನೇನೆಂಬ ಸಂಶಯವಿರುತ್ತದೆ. ಕನ್ನಡ ನಾಡು ನೀರಡ ವಿಸ್ತೃತವೆಂದರೂ ನಾಥ ಕ್ಯಾನರಾ ಜಿಲ್ಲಾ ಮದ್ರಾಸ ಇಲಾಖೆಯಲ್ಲಿ, ಕಲಬುರ್ಗಿಯ ನಿಜಾಮ ಇಲಾಖೆಯಲ್ಲಿ, ದಕ್ಷಿಣ ಮಹಾರಾಷ್ಟ್ರವೆಂದು ಮುಂಬಯಿ ಇಲಾಖೆಯಲ್ಲಿ, ಮತ್ತು ಮೈಸೂರ ರಾಜ್ಯವೆಂದು ಬೇರೆ ಬೇರೆ ಹೆಸರಿನಿಂದ ಹಂಚಿ ಹೋಗಿ, ಮೂಲ ಕನ್ನಡವೆಂಬ ಹೆಸರು ಅಡಗಿ ಹೋಗಿದೆ. ಪ್ರಗತಿಪರ ಮತ್ತು ಆಧುನಿಕ ಕಾಲದಲ್ಲಿ ಈಗಷ್ಟೇ ಕನ್ನಡ ನಾಡಿನ ಜನರ ನಾಮ ಪ್ರಾರಂಭವಾಗುತ್ತದೆ. ಆದರೂ ಇಡೀ ಕರ್ನಾಟಕದ ತುಂಬ ನಾಲ್ಕೂ ಕಡೆಗೆ ಹಬ್ಬುವ ರೀತಿಗೆ ಸರಕಾರ ಮರಾಠಾ ದಕ್ಷಿಣ ಮಹಾರಾಷ್ಟ್ರವೆಂಬ ಹೆಸರುಂಟಲ್ಲದೆ, ಕರ್ನಾಟಕ ರೇಲ್ವೆ ಎಂಬ ಹೆಸರಿಲ್ಲ. ಯಾವ ಬಗೆಯಿಂದ ನೋಡಿದರೂ ಕನ್ನಡಿಗರಿಗೆ ನೆಲೆಯಿಲ್ಲ. ಗೌರವವಿಲ್ಲ. ಹತ್ತಿರದ ಮಹಾರಾಷ್ಟ್ರೀಯರು ಇಂದಿಗೂ ಕರ್ನಾಟಕವನ್ನು ಹೀಯಾಳಿಸುತ್ತಿದ್ದಾರೆ.

ಸ್ವರ್ಗವಾಸಿ ಮೋಂಟಗು ಸಾಹೇಬರು ಕೂಡ ಭಾಷೆಯ ಪ್ರಕಾರ ದೇಶ ವಿಭಾಗಿಸಬೇಕೆಂಬ ಮಾತನ್ನು ಒಪ್ಪಿದ್ದಾರೆ. ಲಾರ್ಡ ಕರ್ಜನ ಸಾಹೇಬರು ಬಂಗಾಲಿಗಳಲ್ಲಿರುವ ಒಕ್ಕಟ್ಟನ್ನು ಸಹಿಸಲಾರದೆ, ವಂಗಭಂಗ ಮಾಡಿದರು. ಬಂಗಾಲಿಗಳು ಗಟ್ಟಿಗರಾದ್ದರಿಂದ, ಲಾರ್ಡ ಸಾಹೇಬರ ಗರ್ವಭಂಗ ಮಾಡಿ, ವಂಗಭಂಗವನ್ನು ರದ್ದು ಮಾಡಿಸಿಕೊಂಡರು. ಬಿಹಾರದ ನಿವಾಸಿಗಳು ಸ್ವತಂತ್ರ ರಾಷ್ಟ್ರೀಯರಾಗಿದ್ದಾರೆ. ಇವರ ತರುವಾಯ ಒಡಿಸಾದೇಶೀಯರು ಒಂದಾಗುವ ಪ್ರಯತ್ನ ನಡಿಸಿದ್ದು, ಈ ವಿಷಯವಾಗಿ ವಿಚಾರ ಮಾಡಲು ಸರಕಾರದವರೇ ಒಂದು ಕಮೀಟಿ ನೇಮಿಸಿದ್ದಾರೆ. ಊರಿಯಾರೆಲ್ಲರು ಒಂದಾಗುವದಕ್ಕೆ ಬಹಳವಾದರೆ ಎರಡೇ ವರ್ಷಗಳು ಹತ್ತುವವು. ಗುಜ್ಜರು, ಮಹಾರಾಷ್ಟ್ರರು ಆಂಧ್ರರು ಮತ್ತು ತಮಿಳರು ಪ್ರತ್ಯೇಕವಾಗಿ ನಾನಾ ಭಿಧಾನ ಪಡೆದಿದ್ದಾರೆ. ತೆಲಗುನಾಡಿನಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ಬಹುತೇಕವಾಗಿ ಗೊತ್ತಾಗಿದೆ. ಯಾವ ಊರಲ್ಲಿ ಯುನಿವ್ಹರ್ಸಿಟಿಯನ್ನು ಕಟ್ಟಬೇಕೆಂಬ ಚರ್ಚೆಯು ನಡೆದಿದೆ. ತಮಿಳರು ತ್ರಿಚಿನಾಪಳ್ಳಿಯಲ್ಲಿ ತಮ್ಮ ಯುನಿವ್ಹರ್ಸಿಟಿಯಾಗಬೇಕೆಂದಿದ್ದಾರೆ. ನೆರೆಹೊರೆಯ ದೇಶಗಳು ಸ್ವಂತ ನಾಡು ಮತ್ತು ಸ್ವಂತ ನುಡಿಯ ಗತಿಯಿಂದ ಇಷ್ಟು ಪ್ರಗತಿಯನ್ನು ಹೊಂದಿರುವಾಗ ಕರ್ನಾಟಕವು ಇನ್ನೂ ಕುರುಡನಂತೆ ತೊಳಲ್ಲಾಡುತ್ತಿರುವದು.

ಸರಕಾರದವರು ಕರ್ನಾಟಕವನ್ನು ಒಂದುಗೂಡಿಸುವ ವಿಚಾರ ಮಾಡದಿದ್ದರೂ, ಕಾಂಗ್ರೆಸ ಸಭೆಯವರು ಕರ್ನಾಟಕಕ್ಕೆ ಸ್ವತಂತ್ರ ಸರ್ಕಲ್ಲು ಕೊಟ್ಟರು. ಮತ್ತೊಂದು ಪ್ರಸಂಗದಲ್ಲಿ ಮಹಾತ್ಮರು ಕರ್ನಾಟಕಕ್ಕೆ ಬಹಾದ್ದೂರ ಕರ್ನಾಟಕವೆಂದು ಹೆಸ್ರು ಉಚ್ಚರಿಸಿದರು. ಆದರೆ ಕರ್ನಾಟಕದಲ್ಲಿಯೇ ನಿಂತು ನಾಲ್ಕೂ ಕಡೆಗೆ ದೃಷ್ಟಿ ಹೋಗುವತನಕ ನೋಡಿದರೆ ಕತ್ತಲೆಯು ಕವಿದಂತೆಯೂ ಆರ್ಯರು ಈಗೀಗ ಈ ನಾಡಿನಲ್ಲಿ ತಿದ್ದುವಡೆಯ ಮುಹೂರ್ತ ಮಾಡಿದ್ದಾರೆಂದೂ ಕಂಡುಬರುವದು. ಆದ್ದರಿಂದ ಕರ್ನಾಟಕವು ಒಂದಾಗಬೇಕೆಂದು ನಿದಿಷ್ಟೆಯುಳ್ಳವರೆಲ್ಲರೂ ಬೆಳಗಾವಿಯಲ್ಲಿ ಕೂಡಿ, ಠರಾವು ಪಾಸಮಾಡಿದರೂ ಅದನ್ನು ವ್ಯವಹಾರದಲ್ಲಿ ತರುವದಕ್ಕೆ ಅದ್ಭುತವಾಗಿ ಶ್ರಮ ಪಡಬೇಕಾಗುತ್ತದೆಂಬುದನ್ನು ಮರೆಯಕೂಡದು.

ಕರ್ನಾಟಕವು ಒಂದಾಗಬೇಕು. ಮುಂಬಯಿ ಮದ್ರಾಸದಂತೆ ಸ್ವತಂತ್ರ ರಾಜಧಾನಿಯಾಗಬೇಕು, ಪರದೇಶಗಳ ಸಂಕಟ ಕರ್ನಾಟಕದಲ್ಲಿಯೇ ಇಳಿಯುವಂತೆ ಮೇಲ್ತೀರ್ಪ ಬಂದಂಬೇಕು. ಸಕಲ ಶಾಸ್ತ್ರ ಮತ್ತು ಕಲೆಗಳನ್ನು ಕಲಿಸುವ ವಿಶ್ವವಿದ್ಯಾಲಯವಾಗಬೇಕು. ಮಂತ್ರಿಮೊದಲ್ಗೊಂಡು, ಸಾಮಾನ್ಯ ಕೆಲಸಗಾರರೆಲ್ಲರೂ ಕನ್ನಡಿಗರೇ ಆಗಬೇಕೆಂದು ಕನ್ನಡಿಗರ ಅಧಿಕಾರವೂ ಈ ಅಧಿಕಾರವು ಪೂರ್ಣವಾಗಬೇಕಾದರೆ ಸ್ವರಾಜ್ಯಬೇಕು. ಮೊದಲು ಸ್ವರಾಜ್ಯ ಅನಂತರ ಕರ್ನಾಟಕದ ಏಕೀಕರಣವೆಂಬ ಚಿತ್ರವು ನಮ್ಮ ಕಣ್ಣಿಗೆ ಕಟ್ಟಿರುತ್ತದೆ. ಕನ್ನಡನಾಡಿನಲ್ಲಿ ವಾಸಿಸುವ ಎಲ್ಲ ಜನಾಂಗದವರು ತಮ್ಮ ನಾಡು ಒಂದಾಗಬೇಕಾದರೆ ಮೊದಲು ಐಕ್ಯದಿಂದ ನಡೆದು, ಸ್ವರಾಜ್ಯ ಸಂಪಾದಿಸಬೇಕಾಗಿರುತ್ತದೆ.

—

ಧಾರವಾಡ ಜಿಲ್ಲೆಯ ಮಹತ್ವದ ಸುದ್ದಿಗಳು

—o—

ಹಾನಗಲ್ಲದಲ್ಲಿ ಮುಖ್ಯ್ಯಾರ ವಕೀಲರಾಗಿದ್ದ ರಾ|| ರಾ|| ನರಸಿಂಹ ಗುರುನಾಥಾಚಾರ್ಯ ಶಿಗ್ಗಾವಿ ಇವರ ಮುಖ್ಯ್ಯಾರಿಯನ್ನು ಹಿಡಿಸಬಾರದೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಮಿ. ಮಾಂಟೇಥ ಸಾಹೇಬರು ಒಂದು ನೋಟೀಸು ತೆಗೆದರು. ಸಾಹೇಬರು ಈ ಸರಕ್ಯುಲರ ತೆಗೆಯುವ ಮೊದಲು ಮಿ. ಶಿಗ್ಗಾವಿಯವರಿಗೆ ಮುಖ್ಯ್ಯಾರ ಕೆಲಸವನ್ನು ಏಕೆ ನಿಲ್ಲಿಸಬಾರದೆಂಬ ಕಾರಣ ಕೇಳಲಿಲ್ಲ. ಸರಕ್ಯುಲರದ ಒಂದು ಪ್ರತಿಯನ್ನು ಮಾತ್ರ ಅವರಿಗೆ ಕಳಿಸಿದರು. ಈ ಹುಕುಮಿನ ಮೇಲೆ ಮಿ. ಶಿಗ್ಗಾವಿಯವರು ಹಾಯಕೋರ್ಟಿಗೆ ಅಪೀಲು ಮಾಡಿದ್ದು ಅಪೀಲು ಮಂಜೂರಾಗಿದೆ. ಇವರ ಸ್ವತಿಯಿಂದ ಮೆಸರ್ಸ ರಂಗರಾವ ಮತ್ತು ಬಾಹಾಗಿರದಾಂಡರು ವಕೀಲರಾಗಿದ್ದಾರೆ.

—

ಬರುವ ಮಾರ್ಚ ತಿಂಗಳಲ್ಲಿ ರಾಣೇಬೆನ್ನೂರ ಮ್ಯುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆ ಇರುವದು. ಈ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷದ ಪರವಾಗಿ ಶ್ರೀ. ಜೋಶಿ ಮತ್ತು ಕಡಾಪೂರದವರಾಗಿ ಇವರು ಉಮೇದವಾರರಾಗುವರು. ಆದರೆ ಇವರಿಗೆ ಅಲ್ಲಿಯ ಶ್ರೀಮಂತ ಸಾಹುಕಾರರೇ ಪ್ರತಿಕೂಲರಿರುವರು. ರಾಣೇಬೆನ್ನೂರಲ್ಲಿ ಅಸಹಕಾರ ಚಳವಳಿ ನಡೆದಾಗ ಕಂಡುಬಂದಂಥ ಒಗ್ಗಟ್ಟು ಅನ್ಯತ್ರದಲ್ಲಿ ಕಂಡುಬರಲಿಲ್ಲ. ಅದೇ ಒಗ್ಗಟ್ಟಿನ ಪ್ರಭಾವದಿಂದ ಮೇಲಿನ ಇಬ್ಬರು ರಾಷ್ಟ್ರೀಯರನ್ನು ಸಹಜವಾಗಿ ಆರಿಸುವಂತಿದೆ. ಸಮಯಾನುಸಾರವಾಗಿ ಈ ವಿಷಯವಾಗಿ ಪತ್ರಿಕೆಗೆ ಬರೆಯುವೆವು.

—

ಕಾಂಗ್ರೆಸವನ್ನು ನೋಡುವ ಛೀಯು ಸಾಧಾರಣ ಸ್ಥಿತಿಯ ಯೋಗ್ಯತೆಯ ಜನರಿಗೆ ಮೀರಿರುವದರಿಂದ, ಅವರಿಗಾಗಿ ಟಿಕೀಟಿನ ದಾಕಲಿಸನ್ನು ಕಡಿಮೆ ಇಡಬೇಕೆಂದು ಬ್ಯಾಡಗಿಯ ಒಬ್ಬ ಗೃಹಸ್ಥರು ಸೂಚಿಸಿದ್ದಾರೆ. ಭಾರೀ ರಕಮು ಕೊಟ್ಟು ಟಿಕೀಟು ಕೊಳ್ಳಲಿಕ್ಕಾಗದವರ ಸಲುವಾಗಿ ಕಾಂಗ್ರೆಸದಲ್ಲಾಗುವ ಠರಾವಿನ ಮೇಲೆ ಪ್ರಮುಖರ ಭಾಷಣ ಮಾಡಿಸುವ ಏರ್ಪಾಡು ಮಾಡಿದ್ದಾರೆ. ಮೇಲಾಗಿ ಒಂದೊಂದು ದಿವಸದ ಮಟ್ಟಿಗೆ ಸಾಧಾರಣ ಜನರಿಗೆ ಪಾಸಿನಂತೆ ಬಿಡಿ ಟಿಕೀಟುಗಳನ್ನು ಮಾರುವ ಸಂಭವವಿದೆ. ಆದ್ದರಿಂದ ಯಾರೂ ಈ ಮಹಾ ಯೋಗವನ್ನು ಕಳಕೊಳ್ಳಬಾರದೆಂದು ನಮ್ಮ ಸೂಚನೆಯು.

—

ಡಿಸೆಂಬರ ತಿಂಗಳ ೫ ನೇಯ ತಾರೀಖು ಆದರೂ ರಿಭೇಣ ಕಾಲೂಕಿನ ಎಷ್ಟೋ ಜನ ಮಾಸ್ತರರಿಗೆ ಇನ್ನೂ ಸಪ್ಟಂಬರದ ಸಂಬಳ ಸಿಕ್ಕಿಲ್ಲೆಂದು ದೂರು ಬರುತ್ತಿದೆ ಗೋಳಿಟ್ಟಿದ್ದಾರೆ. ಇದೇ ವಿಷಯವಾಗಿ ಹಿಂದಕ್ಕೊಮ್ಮೆ ಬರೆದಿದ್ದೇವೆ. ಇಂತಿಷ್ಟು ದಿವಸಗಳಲ್ಲಿ ಸಂಬಳ ಮುಟ್ಟಿಸಲಿಕ್ಕೇ ಬೇಕೆಂದು ವಿಧಿಸಿಯವರು ತಾಲೂಕಿನ ಹೆಡ್ಡಮಾಸ್ತರರಿಗೂ, ಸಿಪಾಯಿಗೂ ಹುಕುಮು ಮಾಡಿ, ಆ ಪ್ರಕಾರ ರಿಪೋರ್ಟ ತರಿಸುವದಾದರೆ ಮಾಸ್ತರರ ಸಂಬಳದ ಗೋಳು ತಪ್ಪುವದು.

—

ಗವ್ಹರ್ನರ ತ್ರಯರ

ಸಹಕಾರ ಮಂತ್ರದ ಜಪ.

ಅಸಹಕಾರ ಚಳವಳಿಯು ಶಾಂತವಾಯಿತು, ಶಿರ್ಘಹೀನವಾಯಿತು, ಸ್ವಾರಸ್ಯಹೀನವಾಯಿತು, ಕಾಂಗ್ರೆಸ್ ತರುಣರು ಶುದ್ಧಾಂಗನ್ಯಾಸ ಮಾಡಿದ್ದು ಗುದ್ದಿ ಕಲ್ಲು ಹೊತ್ತಂತಾಯಿತೆಂದು ಶಿಲಕ್ಷ್ಮಂದಿಂದ ಗವ್ಹರ್ನರ ಜನ ಹಿಕ್ಕಿ ದೊಡ್ಡ ಅಧಿಕಾರಿಗಳು ಪೊಸ್ತು ಸಾಧಿಸಿ, ಅಸಹಕಾರವನ್ನು ಹಂಗಿಸಿ ನಿಂದಿಸುತ್ತಿದ್ದರೂ, ಅಸಹಕಾರದ ಪ್ರತ್ಯಕ್ಷ ಪರಿಣಾಮವು ಅವರ ಅಂತಃಕರಣಕ್ಕಾಗಿ, ಇದೊಂದು ಭೀತಿಯು ವ್ಯಾಪಿಸುತ್ತಿರುತ್ತದೆಂದು, ನಿರ್ವಿವಾದವಾಗಿ ಹೇಳಬಹುದು. ಹಿಂದುಸ್ಥಾನದ ಪ್ರತಿ ಪ್ರಾಂತಗಳಲ್ಲಿ ವಿರಾಜಿಸುವ ಮುತ್ಸದ್ದಿಗಳು, ಮುತ್ಸದ್ದಿಗಳಾದ ಮಂತ್ರಿಗಳು ಸಹಕಾರ ಮಹಿಮೆಯನ್ನು ವರ್ಣಿಸ ಮಾಡಿ, ಇಂಗ್ಲಿಷ ಸರಕಾರದೊಂದಿಗೆ ಸಹಕಾರ ಮಾಡಿದರೇ ಹಿಂದುಸ್ಥಾನದ ಕೋಟಿ ಕಲ್ಯಾಣವಾಗುತ್ತದೆಂದು ಸಾರುತ್ತಿರುವದು. ಇಂಗ್ಲಂಡದ ಪ್ರಸ್ತುತದ ಮುತ್ಸದ್ದಿಗಳು ಇಷ್ಟರವರೆಗೆ ತಮ್ಮ ದರ್ಪದಲ್ಲಿದ್ದವರು ಈಗ ಸಾಮಕಾಲೀನ ಭಾಷಣ ಮಾಡುತ್ತಿದ್ದಾಗ, ಹಿಂದುಸ್ಥಾನಕ್ಕೆ ಸಹಕಾರ ಮಂತ್ರೋಪದೇಶ ಮಾಡುತ್ತಿರುವರು.

ಬಂಗಾಲದ ಗವ್ಹರ್ನರ ಸಾಹೇಬರು ದಬ್ಬಾಳಿಕೆಯ ಮುಖವುತ್ತೆಂಬ ಅನೇಕರನ್ನು ಹಿಡಿದು ಬಂದಿಗೃಹದಲ್ಲಿ ಹಾಕಿದ್ದರೂ, ಬಂಗಾಲಿಗಳಿಗೆ ಸುಸಂಪನ್ನ ಮಾಡಿದ್ದೆಂದು ಆಶ್ವಾಸನ ಕೊಡುತ್ತಿದ್ದಾರೆ. ಕಾಯಿದೆ ಮೀರುವವರು, ಅದನ್ನು ಉಲ್ಲಂಘಿಸುವವರು, ರಾಜ್ಯಕ್ರಾಂತಿ ಅಥವಾ ಅರಾಜಕತೆಯನ್ನು ಮಾಡುವ ಅಪರಾಧಿಗಳಿಗೆ ಶಾಸನ ಮಾಡಿದ ಮಾತ್ರ ಮುತ್ಸದ್ದಿಯ ಕೆಲಸವಲ್ಲ. ಪ್ರಜೆಗಳ ಕಲ್ಯಾಣವನ್ನು ಪೂರ್ಣ ಮಾಡುವದೂ ರಾಜನ ಕರ್ತವ್ಯವಾಗಿರುತ್ತದೆಂದು ಹೇಳಿ, ಈಗಿನ ಸ್ಥಿತಿಯಲ್ಲಿ ಹಿಂದೀ ಜನರು ಬೇಡಿದ್ದಕ್ಕಿಂತ ಹೆಚ್ಚಿನ ರಾಜಕೀಯ ಹಕ್ಕುಗಳನ್ನು ಕೊಡುವದೆಂದೂ ಹಿಂದೂ ಜನರು ತಮ್ಮ ಹಿತ ಸರಕಾರದಿಂದ ನಡೆದರೇ ಹೆಚ್ಚಿನ ಹಕ್ಕುಗಳು ದೊರೆಯುವವೆಂದೂ ಅಭಿಪ್ರಾಯಪಟ್ಟಿದ್ದಾರೆ. ಸಂಯುಕ್ತಪ್ರಾಂತದ ಗವ್ಹರ್ನರರಾದ ಸರ ಹಾರ್ಕೋರ್ಟ ಬಟ್ಲರ ಸಾಹೇಬರು ಕಾನ್ಪೂರದ ಜನರ ಮರ್ಯಾದೆಯನ್ನು ಏಕಕಾಲಕ್ಕೆ ಸೋಡಿದ್ದಾರೆ. ಸ್ವರಾಜ್ಯ ಪಕ್ಷದ ಬೆಟ್ಟು ಇವರಿಗೆ ಸೂಚನಾ ಕಾರ್ಯದ ಇರುತ್ತಿರಲಿಲ್ಲ. ಇವರು ವಿಲಾಯತಿಗೆ ಪ್ರಯಾಣ ಬೆಳೆಸುವದಕ್ಕಾಗಿ ಪ್ರಸ್ತಾನ ಸಹ ತೆಗೆದಿದ್ದಾರೆ. ತಾರ್ಕಿಕ ವ್ಹೋಗುತ್ತಿರುವಾಗ ಹಿಂದುಸ್ಥಾನದ ಸಂತ ವಾದಿಗಳ ವೃದ್ಧಿಯು ಇಂಗ್ಲಂಡದ ಕಡೆಯ ಹಿಂದುಸ್ಥಾನಸುತ್ತಿನ ಸಂಬಂಧವನ್ನು ಅವಲಂಬಿಸುತ್ತದೆ. ಅದು ಇಂಗ್ಲಂಡದ ಕಡೆ ಸರಕಾರ ಮಾಡಿದ್ದರೆ ಹಿಂದುಸ್ಥಾನಕ್ಕೆ ಸ್ವರಾಜ್ಯ ದೊರೆಯುವದೇ ಎಂದು ಬಲವಾಗಿ ಗರ್ವೋಕ್ತಿಯನ್ನಾಡಿದ್ದಾರೆ. ಇವರ ತರುವಾಯ ಮಧ್ಯಪ್ರಾಂತದ ಗವ್ಹರ್ನರರಾದ ಸರ ಫ್ರಾಂಕ ಸ್ಲೈ ಸಾಹೇಬರು ಸೂರ್ಯ ಚಂದ್ರರಿರುವ ತನಕ ಸಹಕಾರದ ಮಂತ್ರೋಚ್ಚಾರವಾಗುತ್ತಿರಬೇಕೆನ್ನುತ್ತಾರೆ. ಅವರು ಇಂಗ್ಲಿಷರನ್ನುದ್ದೇಶಿಸಿ ಅಂದದ್ದೇನೆಂದರೆ– "ರಾಜ್ಯ ಕಾರಭಾರವು ಹಿಂದೀಯರಾಗಬೇಕೆಂದು ಬಯಸುವರು ಅವನ್ನು ಕೇಳಿ ಕೇಳಿ, ಕೆಲವರಿಗೆ ಬೇಸರ ಬಂದಿರಬಹುದು. ನಾನು ಈ ಸಮಯದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಈ ಮೊದಲು ಹಿಂದೂ ಮತ್ತು ಯುರೋಪಿಯನರು ಸಹಕಾರದಿಂದಲೇ ಕೆಲಸ ಮಾಡುತ್ತಾ ಬಂದರು. ಅದೇ ಸ್ಥಿತಿಗೆ ಮುಂದಾದರೂ ಉಭಯತರು ಕೂಡಿ ಹಿಂದುಸ್ಥಾನ ಮತ್ತು ಇಂಗ್ಲಂಡದ ಹಿತಕ್ಕಾಗಿ ಸಹಕಾರದಿಂದ ಕೆಲಸಮಾಡಬೇಕೆಂಬುದು ನನ್ನ ನಂಬಿಕೆಯು."

ಬಂಗಾಲದ ಗವ್ಹರ್ನರ ಸಾಹೇಬರಿಗೆ ಸದ್ಯದಲ್ಲಿ ದಬ್ಬಾಳಿಕೆಯು ಭರದಿಂದ ನಡೆದು ಕಾಣುವದೆ. ಆದ್ದರಿಂದ ಸರಕಾರದ ಯೋಗ್ಯ ಹಕ್ಕುಗಳಿಂದ ಬಂಗಾಲಿಗಳ ಮನಸ್ಸು ಒಲಿಸಿಕೊಳ್ಳುವ ಸರಕಾರದ ಪುರಾಣ ಹೇಳುತ್ತಿರುವರು. ಈ ಅಧಿಕಾರದ ರಾಜ್ಯ ಬೇಗನೆ ಉಪಲಬ್ಧವಾಗಬೇಕೆಂದು ಅಪೇಕ್ಷೆಯುಳ್ಳವರಿಂದ ಪ್ರಜೆಯಲ್ಲಿ ಅಸಹಕಾರ ನೀತಿಯಿಂದ ತಪ್ಪಿಸುತ್ತ ಗವ್ಹರ್ನರರು ಸಹಕಾರದ ಸ್ತುತಿ ಪ್ರಿಯವಾಗಿರುವರು. ಸಂಯುಕ್ತಪ್ರಾಂತದ ಗವ್ಹರ್ನರ ಸಾಹೇಬರು ಸ್ವರಾಜ್ಯದ ದಾರಿ ಹಿಡಿದಿದ್ದರಿಂದ ಚಳ್ವಳಿ ಬಿಟ್ಟಿದ್ದರೂ ತಿಳಿಯಲು ಹೆಚ್ಚುದಿಂದ ಎರಡು ಮಾತುಗಳನ್ನು ಹಾಕುತ್ತ ಸಹಕಾರ ಮಾಡುವುದನ್ನು ಸ್ಮರಿಸಬೇಕಲ್ಲವೇ? ಬೆಳಗಾವಿಯ ಕಾಂಗ್ರೆಸದಲ್ಲಿ ಮತ್ತು ಅನಂತರ ಕೂಡುವ ಪಕ್ಷದ ಸಭೆಯಲ್ಲಿ ಹಿಂದೂ ಜನರು ಬೇಡುವ ರಾಜಕೀಯ ಸ್ವಾತಂತ್ರ್ಯದ ವಿರುದ್ಧ ಹೋಗುವದರಿಂದ ಸಾಹೇಬ ಜನರು ಈಗಿನಿಂದಲೇ ಸಹಕಾರದ ಜಪ ಪ್ರಾರಂಭಿಸಿದ್ದಾರೆಂದೂ ಹೇಳಬಹುದು.

ನೋಟೀಸ.

ಅನ್ನಬಾಯಿ ಕೋಮ ಈರಪ್ಪಾ ಕೋರಿ ಸಾ|| ಕಣಗಿನಹಾಳ ತಾ|| ಕಣಗಿನಹಾಳ ಇವರಿಗೆ ಕೆಳಗೆ ಸಹಿ ಮಾಡುವವರು ಈ ನೋಟೀಸಿನ ದ್ವಾರಾ ತಿಳಿಸುವದೇನಂದರೆ ಬೆಳಗಾವ ಜಿಲ್ಲಾ ಮುನ್ಸೀಫ ಕೋರ್ಟಿನಲ್ಲಿ ಕಣಗಿನಹಾಳ ಗ್ರಾಮದಲ್ಲಿಯ ನಿಮ್ಮ ಮಾಲ್ಕಿ ವಹಿವಾಟಿನಲ್ಲಿರುವ ರಿ|| ಸ|| ನಂ|| ೯೯ ಯಕರೆ ೨-೧೯ ಹೊಲ ಪಾಲು ಮಾಡಿ ಕೊಡಲಿಕ್ಕೆ ನಂಬರ ೧ ಇದನ್ನು ಫಿರ್ಯಾದ ಮಾಡಿದ್ದು ನಿಮ್ಮ ಕಡೆಯಿಂದ ವಾರಸಾಕ ಕರೆಸ ನಾಡೇಗಿಂದ ಜೂರಿ ಮಾಡಿದ ಬಂದಿರುವಿರಿ, ಇದಕ್ಕೆ ಮುಂದೆ ಸದರ ಕಚೇರಿಯ ಮುಂದೆ ತಿಗೆ ಹಾಜರಾಗಬೇಕು ನೀವು ತಾರೀಖ ೧೯೨೪ ನೇ ಜಾನೇವರಿ ೧೫ ನೇ ತಾರೀಖಿಗೆ ನಮ್ಮ ಮೇಲೆ ಯೋಗ್ಯ ಇಲಾಜ ಮಾಡಬಹುದು. ಹಾಗೆ ಮಾಡದಿದ್ದಲ್ಲಿ ಕೋರ್ಟಿನವರು ನಿಮ್ಮ ಮೇಲೆ ಯೋಗ್ಯ ಇಲಾಜ ಮಾಡಬಹುದು. ತಾರೀಖು ೧೪ ನೇ ೨-೧೨-೧೯೨೩ ನೇ ಇಸ್ವಿ.

ಶ್ರೀನಿವಾಸ ಗುರುರಾವ ದತ್ತವೀರ ರಾಯದುರ್ಗ ವಕೀಲ ಬೆಳಗಾವಿ

ಕಂಪೋಝಿಟರರು ಬೇಕು.

ಕನ್ನಡ, ಮರಾಠಿ, ಇಂಗ್ಲೀಷು ಅಥವಾ ಬೇರಾವ ಎರಡು ಭಾಷೆಗಳಲ್ಲಿ ಜಾಣರಾದ ಉತ್ತಮ ಮಾಹಿತಗಾರ ಕಂಪೋಝಿಟರರು ತ್ವರೆಯಾಗಿ ಬೇಕು. ಕಿದ್ವಾರೆ ಪಗಾರ ಅವರ ಅನುಭವ ಪ್ರಕಾರ ೩೦ ರೂಪಾಯಿಯ ವರೆಗೆ ಕೊಡಲಾಗುವದು. ಸ್ವತಃ ಬಂದು ಕ್ಯಾಯಲಾ ಕೊಡಬೇಕು.

ಮ್ಯಾನೇಜರ– ಸಗರ್ ಬ್ರದರ್ಸ, ಹುಬ್ಬಳ್ಳಿ ಪ್ರಿಂಟಿಂಗ್ ವರ್ಕ್ಸ, ಹುಬ್ಬಳ್ಳಿ.

ಕರ್ನಾಟಕ ಮೋಟಾರ ಸರ್ವಿಸ

ಧಾರವಾಡದಿಂದ ಹುಬ್ಬಳ್ಳಿಗೆ

ಮತ್ತು

ಹುಬ್ಬಳ್ಳಿಯಿಂದ ಧಾರವಾಡಕ್ಕೆ

ಧಾರವಾಡದಿಂದ ಹುಬ್ಬಳ್ಳಿಗೆ ಮತ್ತು ಹುಬ್ಬಳ್ಳಿಯಿಂದ ಧಾರವಾಡಕ್ಕೆ ದಿನಾಲು ನಾಲ್ಕು ಸಲ ಮೋಟಾರ ಒಯ್ಯುವ ಸರ್ವಿಸ ಪ್ರಾರಂಭವಾಗಿದೆ ದರ ಎಂಟಾಣೆ.

ವಿಶೇಷ ಸಂಗತಿ ಮತ್ತು ವೇಳಾ ಪತ್ರಿಕೆಯನ್ನು ಬೇಗನೆ ಪ್ರಸಿದ್ಧ ಮಾಡುವೆವು.

ಹುಬ್ಬಳ್ಳಪ್ಪ ರಾಮಪ್ಪ ಹಲವಾಯಿ

ಗ್ಯಾಸ ಮರ್ಚಂಟ ಧಾರವಾಡ

MULGI BROS CO

GAS MERCHANTS

BUHKATTI,

ನಮ್ಮಲ್ಲಿ ಗ್ಯಾಸಲೈಟುಗಳು ಬಾಡಿಗೆಯಿಂದ ಸಿಗುತ್ತವೆ. ಮತ್ತು ಗ್ಯಾಸುಗಳು ಅವರ ಸಾಮಾನುಗಳೂ ಮಾರಾಟಕ್ಕೂ ಇರುತ್ತವೆ.

ನಮ್ಮ ಪತ್ತೆ

ಮುಲ್ಗಿ ಬ್ರದರ್ಸ ಮತ್ತು ಕಂಪನಿ

ಗ್ಯಾಸ ಮರ್ಚಂಟ ಬುದರಗಟ್ಟಿ

ಪೊ ಬೈಲಹೊಂಗಲ

THE DHARWAR BANK LIMITED

DHARWAR

The Bank will accept fixed deposits for 3 4 6 months. For rates of interest apply to the manager.

On mortgage of jewellery 9 PC

A. K. Katti

Managing Director

ಸುಪ್ರಸಿದ್ಧ ಹಿರಾ ಇಂಗು

ಈ ಇಂಗು (೧) ಇಟಾಣಿ (೨) ಕಾಬೂಲಿ [೩] ಕಂಧಾರಿ ಎಂಬ ಮೂರು ತೋಲ ಮಾದರಿಗಳಲ್ಲಿ ದೊರೆಯುತ್ತದೆ. ಇದು ಅಡಿಗೆಯಲ್ಲಿ ರುಚಿಕರವೂ ಸುವಾಸಿಕವೂ ಇದ್ದು ಪೇಟೆಯ ಇಂಗಿಗಿಂತಲೂ ತೀಕ್ಷ್ಣವೂ ರೋಗನಾಶಕವೂ ಇರುವದಲ್ಲದೆ ಅನೇಕ ವೈದ್ಯೋಪಯೋಗಗಳಿಗೆ ಔಷಧದಲ್ಲಿಯೂ ಉಪಯೋಗ ಬೀಳುವದು.

ಇಟಾಣಿ ಇಂಗು ರತ್ತಲಿಗೆ ೮ ರೂ. ಬೆಲೆ ಬೀಳುವದು. ಟಪಾಲ ಖರ್ಚು ಸಹಿತ–

ಕಾಬೂಲಿ	,,	,,	೬ ರೂ	,,	,,	,,	,,	,
ಕಂಧಾರಿ	,,	,,	೩೧೪	,,	,,	,,	,,	,,
ಪ್ಯಾಸ್ಸಿದಬ್ಬಿಯ ೧ ನೇ ನಂಬರ								
ದಪ್ಪುಸ್ಸಿಕ್ಕೆ			೪ ರೂ	,,	,,	,,	,,	,,
ಸದರ ೨ ನೇ ನಂಬರ ಹರ್ಮುನ್ನಕ್ಕೆ ೩ ರೂ				,,	,,	,,	,,	

ಕೇ. ಬ್ರದರ್ಸ ಕೋಲಗೋಡ.

ಪೋಸ್ಟ ಕೋಲಗೋಡ–ತಾಲೂಕ ಗೋಕಾಕ ಜಿಲ್ಲಾ ಬೆಳಗಾವ,

ತ್ವರೆಮಾಡಿರಿ! ಅನುಭವ ತಕ್ಕೊಳ್ಳಿರಿ.

ಆಯುರ್ವೇದ ಔಷಧಾಲಯ, ಧಾರವಾಡ.

ಮದನಕಾಮೇಶ್ವರಿ ಲೇಹ– ಇದರ ಸೇವನೆಯಿಂದ ದೇಹದ ಅಶಕ್ತತಾ, ಮೇಹ, ಶುಕ್ರದ ಉರಿ, ಧಾತು ನಷ್ಟ, ಜೀರ್ಣ ಜ್ವರ ಮೊದಲಾದ ನಾಶ ಹೊಂದಿ ವೀರ್ಯ ವೃದ್ಧಿಯಾಗಿ ಶರೀರಕ್ಕೆ ಉತ್ತಮ ಕಾಂತಿಯನ್ನು ಕೊಡುತ್ತದೆ. ೧೫ ದಿವಸಕ್ಕೆ ಸಾಕಾಗುವ ಡಬ್ಬಿ ಒಂದಕ್ಕೆ ರೂ. ೪-೦, ಎಂಟು ಡಬ್ಬಿಗಳಿಂದ ಗುಣವಾಗುವದು.

ಮೂಲವ್ಯಾಧಿ ನಾಶಕ ಲೇಹ– ಇದರಿಂದ ಮೂಲವ್ಯಾಧಿಯ ಸಂಬಂಧಿಯ ಗುದಶೂಲೆ, ಉರಿ, ಮಲಬದ್ಧತಾ ಮುಂತಾದ ವಿಕಾರ ಕಡಿಮೆ ನಾಶವಾಗುವವು. ಡಬ್ಬಿ ಒಂದಕ್ಕೆ ೧ ರೂಪಾಯಿ.

ಜ್ವರನಾಶಕಚೂರ್ಣ– ಇದರಿಂದ ಯಾವತ್ತು ಪ್ರಕಾರದ ಜ್ವರ, ಪ್ಲೇಗ, ಮಲೇರಿಯಾ ಮುಂತಾದವು ಗುಣಹೊಂದುವವು ಒಂದವರಿಗೆ ಬಹಳೇ ಉಪಯೋಗವಾಗುವದು. ಬಾಟ್ಲಿ ಒಂದಕ್ಕೆ ೩ ಆಣೆ ಡಜನಕ್ಕೆ ೨|| ರೂಪಾಯಿ ೧೦೦ಕ್ಕೆ ೮ ರೂಪಾಯಿ.

ಮೊಲಾಮು

ಗಜಕರ್ಣ ಡಬ್ಬಿ ಡಜನಕ್ಕೆ ೨| ರೂಪಾಯಿ

ಸುದರ್ಶನ ಕೈಲ ಬಾಟ್ಲಿ. ಡಜನಕ್ಕೆ ೩ ರೂಪಾಯಿ

ಸುಗಂಧಿತ ತಲೆಯ ಎಣ್ಣೆ ೧-೩-೦ ರಿಕ್ಕೆ ೧ ಆಣೆ. ೧೦೦ಕ್ಕೆ ೪ ರೂ|

ಹನುಮಂತ ರಂಗೋ ವೈದ್ಯ.

ಆಯುರ್ವೇದ ಔಷಧಾಲಯ,

ಶುಕ್ರವಾರಪೇಟ ಧಾರವಾಡ.

ಲಿಂಗಾಯತ ಖಾನಾವಳಿ

ಮುಂಬಯಿ.

ಮುಂಬಯಿಯಲ್ಲಿ ವೀರಶೈವ (ಲಿಂಗಾಯತ) ಜನರ ಊಟದ ಅನಾನುಕೂಲತೆ ಬಹಳ ಇದ್ದ ಮೂಲಕ ಯಾವತ್ತು ಲಿಂಗಾಯತ ಅಭ್ಯಾಸಿಗಳ ಅಗ್ರಹದ ಮೇಲಿನ ಈ ಸದರ ಖಾನಾವಳಿ ಇಡಬೇಕಾದೆಯು. ಇಲ್ಲಿ ಊಟದ ಜನರಿಗೂ, ಸಂತೆ ವಸಿಸುವರಿಗೂ, ಆಗಾರದ ವಸತಿಗೆ ಪ್ರವಾಸ ಊಟ, ಇವುಗಳಿಗೆ ಯೋಗ್ಯ ಸ್ಥಳ ಸಿಗುವದು ಆದ್ದರಿಂದ ಯಾವತ್ತು ಲಿಂಗಾಯತ ಅಭ್ಯಾಸಿಗಳು ಆಶ್ರಯ ಕೊಡಬೇಕೆಂದು ವಿನಂತಿಯು.

ಪತ್ತೆ–	ಮಾಲೀಕ
ಕಾಲಬಾದೇವಿರೋಡ	ಗುರುಪಾದಪ್ಪಾ ಬೆಟಗೇರಿ
ಪೊಫಲವಾಡಿ	
ಬಸವಾನಾಲು ಬಿಲ್ಡಿಂಗ ೧ ಮಾಳಾ	ಮುಂಬಯಿ.

ಪೂರ್ವ ೧೬ ಆಣೆ ಗುಣ ಯಾವದರಿಂದ ಬರುತ್ತದೆ?

ದ್ರಾಕ್ಷಾದಿ ಸ್ಪ್ರಿಟ ಪಚನದಿಂದ ತಯಾರಿಸಿ ಅತ್ಯಂತ ಶಾಸ್ತ್ರೀಯ ಮತ್ತು ಪಕ್ವತೆಯಿಂದ ಔಷಧವನ್ನು ತಯಾರ ಮಾಡಲಿಕ್ಕಾಗಿ ವಿಶೇಷ ಪರಿಶ್ರಮ ಈ ಕೆಲಸದಲ್ಲಿ ಹೆಸರು ಕನಕರಾಯಿ ಮೆಡಿಕಲ ಸ್ಟೋರದಲ್ಲಿ ಪಕ್ಷ ಒಮ್ಮೆ ಹಾಗೂ ರೀತಿಯ ಮತ್ತು ಇಂಗಿತವಾದರೂ ಇದೇ ಇರುತ್ತದೆ.

ಪೋಮೆಂಟ ಕ್ಯಾರಿಯ ಅಂದರೆ– ಒಂದೇ ಕ್ಷಣದಲ್ಲಿ ಗುಣ.

ಕಲೆ ಬೇಲಿಯ ಮೇಲೆ ನಮ್ಮ ಔಷಧವನ್ನು ಒಮ್ಮೆ ಪರೀಕ್ಷೆ ಮಾಡಿ ನೋಡಿರಿ. ಬೆಲೆ ಎರಡು ಆಣೆ

ವಿಳಾಸ– ಬಿ ಕನಕರಾಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನ ರೋಡ ಹುಬ್ಬಳ್ಳಿ.

ದಿ. ಅಂಕಲಗಿ ಬ್ಯಾಂಕ ಲಿಮಿಟೆಡ

ಧಾರವಾಡ.

೧೯೧೧ ಇಸ್ವಿಯ

ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ ಚಾಲೂ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟ, ಸಾಲ, ಪತ್ರ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಬಂದಲ್ಲಿ ಸಿವಿದಾರ ವರದಿಂದ ಸದರಿ ಮ್ಯಾನೇಜರರ ಕಡೆ ಬರೆಯಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೧-೩೦ ಸಾಯಂಕಾಲ ೩ ರಿಂದ ೬ ವರೆಗೆ ನಡೆಯುವದು.

K. B. Ankalagi

ಮ್ಯಾನೇಜಿಂಗ ಡಾಯರೆಕ್ಟರ

ನೋಟೀಸಿನ ದರಗಳು.

ಒಂದು ಕಾಲಮಿನ ಪಟ್ಟಿ ಪಂಕ್ತಿಗಳಿಗೆ ಒಂದು ರೂಪಾಯಿ. ಮುಂದೆ ಪ್ರತಿ ಪಂಕ್ತಿಗೆ ಪ್ರತಿ ಪಂಕ್ತಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿ ಪಂಕ್ತಿಗೆ ಎರಡು ಆಣೆ. ಒಂದು ವರ್ಷದ ನೋಟೀಸುಗಳನ್ನು ಕರಾರು ಮಾಡುವದಿದ್ದರೆ ಅದರ ದರ ಬೇರೆ ಠರಾಯಿಸಲಾಗುವದು. ಪತ್ರವ್ಯವಹಾರವನ್ನು ಕೊಡುವವರು ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರಮಾಡಬಹುದು.

ಮ್ಯಾನೇಜರ ವಿಜಯ, ಧಾರವಾಡ

ವಿಜಯದ ವರ್ಗಣೀ ದರ

ಸ್ಥಳಿಕರಿಗೆ	
೧ ವರ್ಷಕ್ಕೆ ಹಿಂದಾಗಿ	೧೨–೮–೦ ರೂ
೬ ,,	೬–೦–೦ ರೂ
೩ ,,	೪–೦–೦ ರೂ
ಪರದೇಶಕ್ಕೆ ೧ ವರ್ಷಕ್ಕೆ	೬–೧೨–೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಮನೆಯ ಮಾರಾಟ

ಯಾವತ್ತು ಜನರಿಗೆ ಜಾಹೀರ ನೋಟೀಸಿನಿಂದ ತಿಳಿಸುವದೇನಂದರೆ– ಮಾಳಮಡ್ಡಿಯ ಕಾಲಿಯ ಹತ್ತಿರ ಇರುವ ನನ್ನ ಸ್ವಂತ ಮಾಲಕಿಯ ಮನೆ ಮಾರಾಟಕ್ಕೆ ಇದೆ. ಕೊಂಡುಕೊಳ್ಳುವರು ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬೇಕು. ಈ ವಿಷಯ ಬೇರೆ ಸಂಶಯ ಸ್ಥಿತಿ ಇದ್ದಲ್ಲಿ ಅವನ್ನ ಇದೆ ವಿಷಯ ನಮ್ಮ ಕಡೆಗೆ ಜೈನಮಾಡಬೇಕು.

ತಾ|| ೧೭-೧೧-೨೪

ಗೋವಿಂದರಾವ ಹೊಸಕೆ, ಮಧಿಗಾಳ

C/o ವಿಜಯ ಆಫೀಸ ಧಾರವಾಡ.

ಲಂಬಾಣಿಗಳಿಗೆ ಸೂಚನೆ

